# ನಾದನೂಪುರ ವಂಡಾರು
# Nadanoopura Vandaru



ಸಾಹಿತಿ ಡಾ. ಅಮೃತ ಸೋಮೇಶ್ವರ

ಮುಖ್ಯಸ್ಥರು – ವಂಡಾರು ಗೋವಿಂದ
97418 47278

ಪ್ರಧಾನ ಸಂಪಾದಕರು – ಶುಭಾಶಯ
9482847978

Nadanoopura Yakshothana Trust (NYT) (R.)
Vandaru, Marvi, Vandaru village and Post,
Brahmavara Taluk, Udupi District – 576223
Email : nadanoopuravandaru@gmail.com
Website – https://nyt.1ngo.in/

ಪರಿವಿಡಿ

ಬೋರ್ಡ್ ರೂಮ್
ಸಂಪಾದಕೀಯ
ಅಕ್ಷರಲೋಕದಲ್ಲಿ ಅಮರ ಡಾ. ಅಮೃತ ಸೋಮೇಶ್ವರ
ಕುಂಬ್ಳೆ ಮೇಳದ ಇತಿಹಾಸ – ನೋಟ
ಮಂದಾರ್ತಿ ಮೇಳದ ಹಿರಿಯ ಸ್ತ್ರೀ ವೇಷಧಾರಿ–ದಿವಾಕರ ಆವರ್ಸೆ
"ರಂಗದ ರಾಜ" ಪೆರುವಾಯಿ ನಾರಾಯಣ ಶೆಟ್ಟಿ ಅಸ್ತಂಗತ
ಯಕ್ಷ ಕೃತಿ ಪರಿಚಯ ಮಾಲಿಕೆ–02

## ತಿಂಗಳ ಹೈಲೈಟ್ಸ್

ವಿಮರ್ಶಾ ಲೇಖನಗಳು – ದಾಖಲೆ ಮಾಡಬೇಕಾದ ಬರಹಗಳು

ಅಮರವಾದ ಸಾಹಿತ್ಯ ಲೋಕದ "ಅಮೃತ" ರತ್ನ

ಏಳು–ಬೀಳುಗಳನ್ನು ಕಂಡ ಕುಂಬ್ಳೆ ಮೇಳದ ಇತಿಹಾಸ ರೋಚಕ– ರೋಮಾಂಚಕ

ನಾಯರಿ ಸಂಸ್ಮರಣಾ ಪ್ರಶಸ್ತಿಗೆ ಭಾಜನರಾದ ಸುಂದರ ಸ್ತ್ರೀ ವೇಷಧಾರಿ ದಿವಾಕರ ಆವರ್ಸೆ

"ರಂಗದ ರಾಜ" ಪೆರುವಾಯಿ ನಾರಾಯಣ ಶೆಟ್ಟಿ ಅಸ್ತಂಗತ

## ಬೋರ್ಡ್ ರೂಂ

**ಆತ್ಮೀಯರೆ,**

ಯಕ್ಷಗಾನದಲ್ಲಿ ಸ್ತ್ರೀ ವೇಷ ಕಲಾವಿದರಿಗೆ ಎಷ್ಟು ಬೇಡಿಕೆ ಹಾಗೂ ಪ್ರಸಿದ್ಧಿ ಇದೆಯೋ ಅವರ ಬಗ್ಗೆ ಸಾರ್ವಜನಿಕರಿಗೆ ಅಷ್ಟೇ ಕುತೂಹಲವೂ ಇರುತ್ತದೆ. ಸ್ತ್ರೀ ವೇಷಧಾರಿಯ ಸವಾಲುಗಳ ವಿಚಾರವಾಗಿ ಈ ಹಿಂದೆ ಸಾಕಷ್ಟು ಚರ್ಚೆಗಳು ನಡೆದಿವೆ. ಆದ್ರೂ ಸ್ವತಃ ಸ್ತ್ರೀ ವೇಷ ಕಲಾವಿದನಾಗಿ ನನ್ನ ಕೆಲವು ನೋಟಗಳನ್ನು ಇಲ್ಲಿ ಹಂಚಿಕೊಳ್ಳಬಯಸುತ್ತೇನೆ. ಯಕ್ಷಗಾನವನ್ನು ಗಂಡುಕಲೆ ಎಂದೇ ಹೇಳುತ್ತಾರೆ ಯಾಕೆಂದರೆ ವೃತ್ತಿಪರ ಮೇಳಗಳಲ್ಲಿ ಪುರುಷನೇ ಪುರುಷ ಹಾಗೂ ಸ್ತ್ರೀ ಪಾತ್ರವನ್ನು ನಿಭಾಯಿಸುವ ವ್ಯವಸ್ಥೆ ಹಿಂದಿನಿಂದಲೂ ಇರೋದ್ರಿಂದ ಇದು ಗಂಡುಕಲೆಯೆಂದೇ ಗುರುತಿಸಿಕೊಂಡಿದೆ ಅಂದ್ರೆ ತಪ್ಪಾಗ್ಲಿಕ್ಕಿಲ್ಲ. ಇಲ್ಲಿ ಪುರುಷನೊಬ್ಬ ಹೆಣ್ಣಿನ ಹಾಗೆ ವೇಷ ಧರಿಸಬೇಕಾಗುತ್ತದೆ. ಹೆಣ್ಣಿನ ಹಾವ–ಭಾವ, ನಡಿಗೆಯನ್ನು ರಂಗದಲ್ಲಿ ಪ್ರದರ್ಶಿಸಬೇಕಾಗುತ್ತದೆ. ಮಾತುಗಾರಿಕೆಯಲ್ಲಿ ಲಾಲಿತ್ಯ, ಹೆಚ್ಚಾಗಿ ಧ್ವನಿ ಬದಲಾವಣೆಯ ಅವಶ್ಯಕತೆಯೂ ಇದೆ. ಕಲಾವಿದನೊಬ್ಬ ಒಂದು ಪಾತ್ರಕ್ಕೆ ನ್ಯಾಯ ಕೊಡಬೇಕಾದಾಗ ಪರಕಾಯ ಪ್ರವೇಶ ತುಂಬ ಮುಖ್ಯ. ಆರಂಭದಲ್ಲಿ ಯಾವುದೇ ಪುರುಷ ಕಲಾವಿದ ಸ್ತ್ರೀಯ ಪಾತ್ರಕ್ಕೆ ಹೊಂದಿಕೊಳ್ಳೇಕಾದ್ರೆ ತುಂಬ ಶ್ರಮಿಸ್ತಾನೆ. ಆರಂಭದಲ್ಲೇ ಅವನಿಗೆ ಯಾವುದೂ ಒಗ್ಗಿಕೊಳ್ಳಲಾರದು. ರಂಗಸ್ಥಳದಲ್ಲಿ ದಿನವೂ ಅಭ್ಯಾಸ ಮಾಡುತ್ತಾ ಮಾಡುತ್ತಾ ಒಂದು ಹಂತಕ್ಕೆ ಹೆಣ್ಣಿನ ಪಾತ್ರಗಳಿಗೆ ಪುರುಷ ಕಲಾವಿದ ನ್ಯಾಯ ಕೊಡುವ ಮಟ್ಟಕ್ಕೆ ಬೆಳೀತಾನೆ. (ಅದಕ್ಕಾಗಿಯೇ ಯಕ್ಷಗಾನ ಇನ್ನಿತರ ಕಲೆಗಳಿಗಿಂತ ಕಷ್ಟ ಹಾಗೂ ಸಾಧನೆಯ ವಿದ್ಯೆಯೂ ಹೌದು). ಅವನ ಪಾತ್ರಗಳನ್ನು ಅವನೇ ವಿಮರ್ಶಿಸಿಕೊಳ್ಳಬೇಕು. ಹಿರಿಕಲಾವಿದರ ಸಲಹೆಗಳನ್ನು ಅಳವಡಿಕೊಳ್ಳಬೇಕು, ಪಾತ್ರಗಳನ್ನು ಅಭ್ಯಾಸ ಮಾಡಬೇಕು, ನೋಡುಗರ ಅಭಿಪ್ರಾಯಗಳನ್ನು ಪರಿಗಣಿಸ್ಬೇಕು, ನಿಧಾನಕ್ಕೆ ಬದಲಾವಣೆಗಳನ್ನು ತಂದುಕೊಳ್ಬೇಕು. ಹೀಗಾದಾಗ ವೇಷಕ್ಕಷ್ಟೆ ಅಲ್ಲ ಪಾತ್ರಕ್ಕೂ ಒಂದು ಸುಂದರ ರೂಪ ಬರುತ್ತದೆ. ವೇಷಭೂಷಣದಲ್ಲಿ ಅಚ್ಚುಕಟ್ಟುತನ, ಪಾತ್ರ ನಿರ್ವಹಣೆಯಲ್ಲಿ ನಾಜೂಕುತನ ಎರಡೂ ಬರಬೇಕಾದರೆ ಕಲಾವಿದನ ಪರಿಶ್ರಮವೇ ದೊಡ್ಡದು. ಇಷ್ಟಾದರೆ ಸ್ತ್ರೀವೇಷ ಕಲಾವಿದ ಪ್ರೇಕ್ಷಕನಿಗೆ ಅಚ್ಚುಮೆಚ್ಚು ಆಗಿಬಿಡುತ್ತಾನೆ.

ಇಷ್ಟೆಲ್ಲ ಕಷ್ಟಪಟ್ಟು ಪ್ರಸಿದ್ದಿಯೊಂದು ಬಂದರಷ್ಟೇ ಸುಖವೇ? ಅಲ್ಲ. ಈ ಪ್ರಸಿದ್ಧಿಯ ಹಿಂದೆ ಕಲಾವಿದ ಅನುಭವಿಸುವ ಸವಾಲು ನೋವುಗಳೂ ಹಲವಾರು. ರಂಗಕಲೆಗಳಲ್ಲಿ ಹೆಣ್ಣು ಮಕ್ಕಳಿಗೆ ಯಾವ ರೀತಿ ಸಮಸ್ಯೆ ಸವಾಲುಗಳಿರುತ್ತವೆಯೋ ಹಾಗೇಯೇ ಸ್ತ್ರೀ ವೇಷ ಮಾಡುವ ಪುರುಷ ಕಲಾವಿದರೂ ಇಂತಹ ಸಮಸ್ಯೆಗಳನ್ನು ಎದುರಿಸುತ್ತಾರೆ. ಇದು ಬಹಳ ಸೂಕ್ಷ್ಮವಾದ ವಿಚಾರ.

ಪಾತ್ರದಲ್ಲಿ ಪರಕಾಯ ಪ್ರವೇಶಕ್ಕೆ ಹೆಣ್ಣಿನ ಅನುಕರಣೆ ತುಂಬಾ ಮುಖ್ಯ ಆದರೆ ಆದ್ರೆ ಅದನ್ನೇ ತನ್ನ ಜೀವನದಲ್ಲಿ ಸ್ವಭಾವವಾಗಿ ಬೆಳೆಸಿಕೊಂಡರೆ ಜನರು ಆತನನ್ನು ನೋಡೋ ದೃಷ್ಟಿ ಬೇರೆಯದೇ ಆಗಿರುತ್ತದೆ. ಕೆಲವರದು ಅನುಕಂಪದ ದೃಷ್ಟಿ, ಕೆಲವರದು ಕೀಳು ದೃಷ್ಟಿ, ಕೆಲವರದು ಅಶ್ಲೀಲ ಭಾವ, ಕೆಲವರದು ಕುಹಕದ ನೋಟ, ಹೀಗೆ ಸಮಾಜದ ದೃಷ್ಟಿಕೋನಗಳು ಬೇರೆ ಬೇರೆ ರೀತಿಯದಾಗಿರುತ್ತವೆ. ಕಲಾವಿದರಲ್ಲಿ ಅದರಲ್ಲೂ ಮುಖ್ಯವಾಗಿ ಸ್ತ್ರೀ ವೇಷ ಕಲಾವಿದರು ವೃತ್ತಿ ಹಾಗೂ ಜೀವನದಲ್ಲಿ ಭಿನ್ನ ವ್ಯಕ್ತಿತ್ವವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ಅವರು ನಿಜ ಜೀವನದಲ್ಲಿ ರಂಗಸ್ಥಳದ ಪಾತ್ರವಾಗಿ ಮುಂದುವರೆಯಬಾರದು. ಸ್ತ್ರೀ ವೇಷದ



ಗೋವಿಂದ ವಂಡಾರು

ಹಾವಭಾವ, ವಯ್ಯಾರಗಳನ್ನು ಸಾರ್ವಜನಿಕ ಸ್ಥಳಗಳಲ್ಲೂ ಪ್ರದರ್ಶಿಸಿದರೆ ಅವರ ವೈಯುಕ್ತಿಯ ಘನತೆಗೇ ಕುಂದುಂಟಾದ ಅನೇಕ ಉದಾಹರಣೆಗಳಿವೆ. ಇದರಿಂದಾಗಿ ಎಲ್ಲ ಕಲಾವಿದರಿಗೂ ಒಟ್ಟಾಗಿ ಬೇಡದ ಹಣೆಪಟ್ಟಿಯನ್ನು ಕಟ್ಟಿಬಿಡುತ್ತಾರೆ. ಕೆಲವೊಂದು ಸಾರಿ ಅಭ್ಯಾಸ ಬಲದಿಂದ ಬೇರೆ ಸಮಯಗಳಲ್ಲಿ ಹೆಣ್ಣಿನಂತೆ ಭಾವಗಳು ಪ್ರಕಟವಾಗಬಹುದು. ಹಾಗಂತ ಅದು ದೊಡ್ಡ ಅಪರಾಧವೂ ಅಲ್ಲ. ಅದಕ್ಕಾಗಿ ಕಲಾವಿದನ್ನನು ಕೀಳು ದೃಷ್ಟಿಯಿಂದ ನೋಡುವುದೂ ತಪ್ಪೇ. ಸ್ತ್ರೀ ವೇಷ ಕಲಾವಿದರು ಪುರುಷ ಪಾತ್ರಗಳನ್ನು ಮಾಡಲು ಅಸಮರ್ಥರು ಅನ್ನೋ ತಪ್ಪು ತಿಳುವಳಿಕೆ ಅನೇಕರಿಗಿದೆ. ಆದರೆ ಎಷ್ಟೋ ಕಲಾವಿದರು ಸ್ತ್ರೀ ಪಾತ್ರಗಳಲ್ಲಿದೆ ಇತರ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸುವವರು ಇದ್ದಾರೆ.

ಸಾಮಾನ್ಯವಾಗಿ ಕಲಾವಿದರು ಹೇಗೆ ವೇಷ ಮಾಡಿಕೊಳ್ಳುತ್ತಾರೆ ಅನ್ನೋದನ್ನು ನೋಡೋ ಕುತೂಹಲ ಪ್ರೇಕ್ಷಕರಿಗಿರುತ್ತದೆ. ಅದು ಕಲೆಯ ಮೇಲಿನ ಪ್ರೀತಿ, ಅಭಿಮಾನ. ಇದು ಸಹಜ ಆಸಕ್ತಿ ಹಾಗೂ ಕುತೂಹಲವಾಗಿದ್ದರೆ ತೊಂದರೆಯಿಲ್ಲ. ಆದರೆ ಸ್ತ್ರೀ ವೇಷದವರು ಉಡುಪುಗಳನ್ನು ಹೇಗೆ ಹಾಕಿಕೊಳ್ಳುತ್ತಾರೆ ಅದನ್ನೇ ನೋಡುವ ಕೆಟ್ಟ ಕುತೂಹಲವೂ ಕೆಲವರಿಗಿರುತ್ತದೆ. ಅದಕ್ಕಾಗಿಯೇ ಚೌಕಿಗ ಬಂದು ಕುಹಕದಿಂದ ನೋಡುವವರು, ಲಘುವಾಗಿ ಮಾತನಾಡುವವರು ನಮ್ಮ ಮಧ್ಯೆ ಇದ್ದಾರೆ. ಆದರೆ ಒಳ್ಳೆಯವರ್ಯಾರು ಕೆಟ್ಟ ಅಭಿರುಚಿಯವರ್ಯಾರು ಎಂದು ಗುರುತಿಸುವುದೇ ಕಷ್ಟ. ಸಾಮಾನ್ಯವಾಗಿ ಚೌಕಿಯಲ್ಲಿ ಪುರುಷ ಹಾಗೂ ಸ್ತ್ರೀ ವೇಷ ಕಲಾವಿದರು ಅರ್ಧ ಉಡುಪಿನಲ್ಲಿರುತ್ತಾರೆ. ಇಂಥ ಸಮಯದಲ್ಲಿ ಪ್ರೇಕ್ಷಕರು ಬಂದು ನೋಡುವುದು ಕೆಲ ಕಲಾವಿದರಿಗೆ ಮುಜುಗರದ ಸಂಗತಿಯೂ ಹೌದು. ಚೌಕಿಗೆ ಬಂದಾಗಲೂ ಕಲಾವಿದರ ಅಭಿಮಾನಿಗಳು ಕಲಾವಿದರಿಗೆ ಮುಜುಗರವಾಗದ ರೀತಿಯಲ್ಲಿ ನಡೆದುಕೊಳ್ಳುವುದು ಉತ್ತಮ. ಯಕ್ಷಗಾನದ ಬಗ್ಗೆ ತಿಳಿದಿರದ ಪ್ರೇಕ್ಷಕರು ತಿಳಿದುಕೊಳ್ಳುವುದರಲ್ಲಿ ತಪ್ಪೇನಿಲ್ಲ. ಆದರೆ ಕಪೋಲಕಲ್ಪಿತವಾಗಿ ಕಲಾವಿದರ ಜೀವನ ಹೀಗೇ ಎಂದು ಊಹಿಸುವುದು ತಪ್ಪು. ತಪ್ಪುಕಲ್ಪನೆಗಳನ್ನು ಹೊಂದುವುದು ತಪ್ಪು. ಏನೇ ಆದರೂ ಆತ್ಮಗೌರವ ಎಲ್ಲರಿಗೂ ಒಂದೇ ಅಲ್ಲವೇ?

***ನಿಮ್ಮವನೆ, ಗೋವಿಂದ ವಂಡಾರು***

---

## ಸಂಪಾದಕೀಯ

***ಆತ್ಮೀಯ ಓದುಗರೆ,***

ಯಕ್ಷಗಾನ ವಿಮರ್ಶೆ ಅಂದ್ರೆ ಇತರ ಸಾಹಿತ್ಯ ಪ್ರಕಾರಗಳಂತಲ್ಲ. ಇದು ಬರೆಯ ಒಂದು ಕೃತಿ ವಿಮರ್ಶೆ ಮಾತ್ರ ಆಗಿರೋದಿಲ್ಲ. ರಂಗಪ್ರದರ್ಶನದ ವಿಮರ್ಶೆಯೂ ಅಲ್ಲ. ಕೇವಲ ಸಂಭಾಷಣೆಯ ವಿಮರ್ಶೆಯಷ್ಟೇ ಆಗಿರೋದಿಲ್ಲ. ಇದು ಸಮಗ್ರವಾಗಿ, ಕಥೆ, ರಂಗನಡೆ, ವೇಷಭೂಷಣ, ಸಂಭಾಷಣೆ, ಸಾಹಿತ್ಯ ಹಿಮ್ಮೇಳ ಮುಮ್ಮೇಳದ ಸಂಯೋಜನೆ, ಬೆಳಕು, ಬಣ್ಣಗಾರಿಕೆ, ರಂಗ ಸಂಯೋಜನೆ ಇವೆಲ್ಲದರ ಸಮಗ್ರ ಅವಲೋಕನವಾಗಿರುತ್ತದೆ. ಹಾಗಾಗಿ ಯಕ್ಷಗಾನ ವಿಮರ್ಶೆ ಬೇರೆ ವಿಮರ್ಶೆಗಳಿಗಿಂತ ಭಿನ್ನ. ಒಂದು ಸಿನಿಮಾದಲ್ಲಿ, ಕಥೆ, ಹಾಡು, ಸಂಗೀತ ರಾಗ ಸಂಯೋಜನೆ, ಫೈಟ್, ಸಾಹಸ, ಸಂಭಾಷಣೆ, ಸಂಕಲನ, ಕೆಮರಾ ವರ್ಕ್, ಇವೆಲ್ಲವೂ ಹೇಗೆ ವಿಮರ್ಶೆಗಳಿಗೊಳಪಡಬೇಕೋ ಹಾಗೆಯೇ ಯಕ್ಷಗಾನದ ವಿವಿಧ ಅಂಗಗಳು ವಿಮರ್ಶೆಯೊಳಗೆ ಬರುತ್ತವೆ. ಯಕ್ಷಗಾನ ಪ್ರಸಂಗ ವಿಮರ್ಶೆಯ ಬಗ್ಗೆ ಹೇಳಬೇಕಂದ್ರೆ ಇನ್ನೂ ಯಕ್ಷಗಾನವನ್ನು ವೃತ್ತಿಪರವಾಗಿ ವಿಮರ್ಶೆ ಮಾಡುವಂತಹಾ ವಿಚಾರದಲ್ಲಿ ಕೊರತೆ ಇದೆ. ಕೆಲವು ಪೌರಾಣಿಕ ಪ್ರಸಂಗಗಳ ವಿಮರ್ಶೆ ನಡೆದಿದೆ. ಶಿಕ್ಷಿತರಾದ ಯಕ್ಷಗಾನದ ಆಳವಾದ ಜ್ಞಾನ ಇದ್ದವರೂ ಕಾಲ್ಪನಿಕ ಹೊಸ ಪ್ರಸಂಗಗಳಲ್ಲಿ ಆಸಕ್ತಿ ತೋರಿಸೋದು ಕಡಿಮೆ. ಪೌರಾಣಿಕ ಪ್ರಸಂಗಗಳ ಕೆಲವೊಂದು ವಿಮರ್ಶೆಗಳು ಕೆಲವೊಂದು ಉದ್ದೇಶಗಳಿಗಾಗಿ ಬರೆಯಲ್ಪಟ್ಟಿವೆ. ಆದ್ರೆ ಹೊಸ ಕಾಲ್ಪನಿಕ ಪ್ರಸಂಗಗಳ ವಿಮರ್ಶೆ ಬರೆಯುವವರಲ್ಲಿ ಕೆಲವರು ಕೆಲವೊಂದು ವಿಚಾರಗಳನ್ನು ಮಾತ್ರ ಆಸ್ವಾದಿಸುವಂಥವರು. ಇಂಥಹ ವಿಮರ್ಶೆಗಳಲ್ಲಿ ಬರಹಗಾರನ ಆಸಕ್ತಿ ಯಾವುದರ ಮೇಲಿರುತ್ತದೋ ಅದಕ್ಕೇ ಮಾತ್ರ ಆ ವಿಮರ್ಶೆ ಸೀಮಿತವಾಗಿರುತ್ತದೆ. ಕೆಲವರಿಗೆ ಸಂಭಾಷಣೆ ಚರ್ಚೆ ಮಾತ್ರ ಇಷ್ಟ, ಕೆಲವರಿಗೆ ಭಾಗವತಿಕೆ ಮಾತ್ರ ಇಷ್ಟ. ಕೆಲವರಿಗೆ ನಾಟ್ಯ ಮಾತ್ರ ಇಷ್ಟ. ಕೆಲವರಿಗೆ ಒಂದು ಮೇಳದ ಪ್ರಸಂಗ ಹೇಗೇ ಇರಲಿ ಅದು ಚೆಂದವೇ, ಅವರ ಇಷ್ಟದ ಕಲಾವಿದ ಏನೇ ಮಾಡಲಿ ಅದು ಸರಿಯೇ. ಇನ್ನೂ ಕೆಲವರು ಯಕ್ಷಗಾನದ ಕುರಿತು ಪೂರ್ವಾಗ್ರಹ ಪೀಡಿತರಾಗಿರೋರು. ಇಂತಹ ಬರಹಗಾರರಲ್ಲಿ ವೃತ್ತಿಪರತೆ ಕಡಿಮೆ. ಸಿನಿಮಾದ ರೀತಿಯಲ್ಲಿ ತೀಕ್ಷ್ಣ ಹಾಗೂ ವಸ್ತುನಿಷ್ಠವಾದ ವಿಮರ್ಶೆ ಯಕ್ಷಗಾನದಲ್ಲಿ ಮಾಡುವುದೂ ಕಷ್ಟವೆ. ಯಾಕೆಂದರೆ ಯಕ್ಷಗಾನದ ಪ್ರೇಕ್ಷಕ ವರ್ಗ ಕಡಿಮೆ. ಕಲಾವಿದರ ಸಂಖ್ಯೆಯೂ ಕಡಿಮೆಯೇ. ಜನಪದ ಮತ್ತು ಆರಾಧನಾ ನೆಲೆಯಲ್ಲಿ ಆಡುವ ಆಟ, ವಿಮರ್ಶೆ ಮಾಡಬೇಕಾದಷ್ಟು ದೊಡ್ಡ ಸಂಗತಿ ಅಲ್ಲ ಅನ್ನೋದು ಕೆಲವರ ಅಭಿಪ್ರಾಯ, ಅಥವಾ ಆ ಆಸಕ್ತಿಯೂ ಹೆಚ್ಚಿನವರಿಗಿಲ್ಲ. ಕಾಲ್ಪನಿಕ ಪ್ರಸಂಗಗಳ ವಿಮರ್ಶೆಗಳು ಹೇಗಿರುತ್ತವೆಂದರೆ ಕಲಾವಿದರ, ಅಥವಾ ಮೇಳದ ಅಭಿಮಾನಿಯಾದವರು ಅವರಿಗೆ ಬೇಕಾದಂತೆ ಅತಿಯಾಗಿ ಹೊಗಳಿ ಬರೆಯುವುದು ಹೀಗೆ ಇರುತ್ತದೆ. ಉತ್ಪ್ರೇಕ್ಷೆ ಮಾಡಿ ಹೇಳುವುದು ಇರುತ್ತದೆ. ಇದು ಪರಿಪೂರ್ಣ ವಿಮರ್ಶೆ ಆಗಲಾರದು. ಕೆಲವರ ಯೋಚನೆ ಏನೆಂದರೆ ಅವರ ಯೋಚನೆ ಅನುಭವದ ಪ್ರಕಾರ ಇದಮಿತ್ಥಂ, ಯಕ್ಷಗಾನ ಅಂದ್ರೆ ಹೇಗಿರ್ಬೇಕೋ ಹಾಗೇ ಇರಬೇಕು ಎಂದು ಆಶಿಸುವವರು. ಯಕ್ಷಗಾನದ ಬೆಳವಣಿಗೆಗೆ ವಿಶಾಲವಾಗಿ ಯೋಚನೆ ಮಾಡಲು ಶಕ್ತರಲ್ಲದವರು. ಮುಂದೆ ಬಾರದವರು. ಅವರ ಪ್ರಕಾರ ಹೊಸ ಪ್ರಯೋಗಶೀಲತೆ ಅಪಸವ್ಯವೇ. ಸ್ವೀಕಾರಾರ್ಹವಲ್ಲ. ಹಾಗಂತ ಪ್ರಯೋಗಶೀಲತೆ ಹೊಸತನದ ದೃಷ್ಟಿಯಲ್ಲಿ ಮಿತಿ ಮೀರಿದ ಅಪಸವ್ಯಗಳೂ ಯಕ್ಷಗಾನ ಕಲೆಯೊಳಗೆ ಕಳೆಗಳಂತೆ ಸೇರಿಕೊಂಡಿವೆ. ಕಾಲ್ಪನಿಕ ಪ್ರಸಂಗಗಳಲ್ಲಿ ೮೦ ರಷ್ಟು ಸಿನಿಮಾ ಹಾಡುಗಳೇ ಪ್ರಧಾನ. ಅವುಗಳಿಗೇ ಪ್ರಚಾರ ಹೆಚ್ಚು. ಪೌರಾಣಿಕ ಪ್ರಸಂಗಗಳಲ್ಲಿ ರಾಜಕೀಯ ವ್ಯಕ್ತಿ, ಪಕ್ಷದ ಒಲವು ತೋರಿಸಿ ಮಾತನಾಡುವುದು, ಆಂಗ್ಲ ಭಾಷೆಯ ಬಳಕೆ, ಸಿನಿಮಾ ಸನ್ನಿವೇಷಗಳ ಬಳಕೆ, ಚಿತ್ರ–ವಿಚಿತ್ರ ರಂಗ ಸಂಯೋಜನೆಗಳು, ಆಕರ್ಷಣೆಗಳು, ಏಕ ಕಾಲದಲ್ಲಿ 10 ಮಹಿಷರ ಪ್ರವೇಶ, ಕ್ರೇನ್‌ನಲ್ಲಿ ದೇವಿಯ ಪ್ರವೇಶ, ರಂಗಸ್ಥಳದಲ್ಲಿ ಅಯ್ಯಪ್ಪ, ದೇವಿ ಪಾತ್ರಧಾರಿಗೆ ಮುಖ ಮುಚ್ಚುವಷ್ಟು ಹೂ ಮಾಲೆ ಹಾಕುವುದು (ಚೌಕಿಯಲ್ಲಿ ಆ ಕಲಾವಿದ ಕುಡಿದು ಬಂದಿದ್ದರೂ ಸರಿಯೇ.) ಈ ಎಲ್ಲಾ ಕಾರಣಗಳಿಗಾಗಿ ವಿಮರ್ಶೆ ಅಗತ್ಯವೇ. ಹಾಗಂತ ವಿಮರ್ಶೆ ವೈಯುಕ್ತಿಕ ಟೀಕೆ, ನಿಂದನೆ. ಅವಮಾನ ಆಗಿರಲೇಬಾರದು. ಯಕ್ಷಗಾನದಲ್ಲಿ ಹೆಚ್ಚು ಬೆಳಕಿಗೆ ಬಾರದ ಸಂಗತಿಗಳೆಂದರೆ ಚೆಂಡೆ ಮದ್ದಳೆಯವರ ಹೊಂದಾಣಿಕೆ, ಅವರ ಸಹಕಾರ ಒಂದು ಪ್ರದರ್ಶನದ ಯಶಸ್ಸಿಗೆ ಎಷ್ಟು ಪೂರಕವಾಗಿರುತ್ತದೆ, ಕಥಾ ತಂತ್ರಗಾರಿಕೆ, ಹಿಮ್ಮೇಳ ಮುಮ್ಮೇಳದ ಹೊಂದಾಣಿಕೆ, ಸಂಪೂರ್ಣ ಕಥಾ ಆಶಯ, ಸಾಂಪ್ರದಾಯಿಕ ನಡೆಯಲ್ಲಿ ಹೊಸತನದ ಅಳವಡಿಕೆ ಆಗಿರೋ ಬಗ್ಗೆ ವಿಮರ್ಶೆಗಳು ನಡೆಯೋದು ಕಡಿಮೆ. ನಡೆದರೆ ಉತ್ತಮ. ಯಕ್ಷಗಾನ ಕ್ಷೇತ್ರದಲ್ಲಿ ಪ್ರಸಂಗ ಸಾಹಿತ್ಯ, ಹಿಮ್ಮೇಳ, ಮುಮ್ಮೇಳ, ವೇಷಗಾರಿಕೆ, ಭಾಗವತಿಕೆ, ಇವೆಲ್ಲ ಎಷ್ಟು ಮುಖ್ಯವೋ ಅಷ್ಟೆ ಮುಖ್ಯವಾದದ್ದು ವಿಮರ್ಶೆಗಳ ಸಂಗ್ರಹ ಕಾರ್ಯ. ವಿಮರ್ಶೆಯೂ ಒಂದು ರೀತಿಯ ಸಾಹಿತ್ಯವೇ. ಅದಕ್ಕೂ ಮಿಗಿಲಾಗಿ ವರದಿ ಎಂದೆನ್ನಬಹುದು. ಇದು ದಾಖಲಾಗುವುದೂ ಬಹಳ ಮುಖ್ಯವಾದ ಸಂಗತಿಯೇ. ಸದ್ಯ ವೃತ್ತಿಪರ ಪರ್ತಕರ್ತರೇ ಯಕ್ಷಗಾನದ ಬಗ್ಗೆ ಒಲವಿರುವ ಬೆರಳೆಣಿಕೆಯ ಪ್ರಸಂಗ ವಿಮರ್ಶಕರು. ಅವರಲ್ಲಿ ಲಕ್ಷ್ಮೀ ಮಚ್ಚಿನ, ಉದಯ್ ಶೆಟ್ಟಿ ಪಡುಕೆರೆ, ಶಾಂತಾರಾಮ ಕುಡ್ವ ಮೊದಲಾದರು ವಸ್ತುನಿಷ್ಠವಾಗಿ ಯಕ್ಷಗಾನದ ವಿಮರ್ಶೆ ಬರೆಯುವುದನ್ನು ನೋಡಿದ್ದೇವೆ. ಏನೇ ಆಗಲಿ ವಿಮರ್ಶೆ ಇಲ್ಲದೆ ಯಕ್ಷಗಾನದ ಕಲಾವಿದರು ಸ್ವೇಚ್ಛಾಹಾರಿಗಳಾಗುವುದೂ ಒಳ್ಳೆಯದಲ್ಲ. ವಿಮರ್ಶೆ ವಿಪರೀತವೂ ಆಗದೇ ಎಲ್ಲವೂ ಕಲೆಯ ಬೆಳವಣಿಗೆಗೆ ಪೂರಕವಾಗಿದ್ದರೆ ಒಳಿತು. – ***ಶುಭಾಶಯ, ಸಂಪಾದಕರು***

# ಅಮರವಾದ ಸಾಹಿತ್ಯ ಲೋಕದ "ಅಮೃತ" ರತ್ನ

**ಸಾ**ಹಿತ್ಯದ ಬಹು ಪ್ರಕಾರಗಳಲ್ಲಿ ವಿಶಾಲವಾಗಿ ಹಬ್ಬಿ ಅನೇಕ ಮಹತ್ವದ ರಚನೆ, ಕೃತಿಗಳಿಂದ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ ಡಾ ಅಮೃತ ಸೋಮೇಶ್ವರ ಸಾಹಿತ್ಯ ಲೋಕದ ಅನರ್ಘ್ಯ ರತ್ನವೇ ಸರಿ.

ಓದುವ ಬರೆವ ಹವ್ಯಾಸ ಆಧ್ಯಾತ್ಮಿಕ, ಲೌಕಿಕ, ಬೌದ್ಧಿಕ ಜ್ಞಾನ ನೀಡುತ್ತೆ ಅನ್ನೋದಕ್ಕಿಂತ ಹೆಚ್ಚಾಗಿ ಆತ್ಮ ಸುಖ, ಆನಂದವನ್ನು ನೀಡುತ್ತೆ. ಇದು ಡಾ. ಅಮೃತ ಸೋಮೇಶ್ವರ ಅವರ ಮಾತು. ಹೀಗೆ ಮನಸಿನ ಖುಷಿಗಾಗಿ ಸಾಹಿತ್ಯ ಕೃಷಿಗೆ ತೊಡಗಿದ ಮಂಗಳೂರಿನ ಸೋಮೇಶ್ವರದ ಡಾ ಅಮೃತರು, ಸಾಹಿತ್ಯ ಭಂಢಾರಕ್ಕೆ ನೀಡಿದ ಕೊಡುಗೆಗಳು ಅನನ್ಯ.

ಇವರು ಮಂಗಳೂರು ಸಮೀಪದ ಗ್ರಾಮದ ಅಡ್ಕ ಎಂಬಲ್ಲಿ 1935 ಸೆಪ್ಟೆಂಬರ್ 27ರಂದು ಹುಟ್ಟಿದ್ರು. ಇವರ ತಂದೆ ಚಿರಿಯಂಡ. ತಾಯಿ ಅಮುಣಿ. ಸೋಮೇಶ್ವರರು ಕೋಟೆಕಾರಿನ ಸ್ಟೆಲ್ಲ ಮೇರಿಸ್ ಕಾನ್ವೆಂಟ್ ನಲ್ಲಿ ಪ್ರಾಥಮಿಕ ಶಿಕ್ಷಣ ಪಡೆದರು. ಅನಂತರ ಇಲ್ಲಿನ ಆನಂದಾಶ್ರಮದಲ್ಲಿ ಪ್ರೌಢಶಾಲೆ, ಅಲೋಶಿಯಸ್ ಕಾಲೇಜಿನಲ್ಲಿ ಪದವಿ ಅಭ್ಯಾಸ ಮಾಡಿದರು. ಇವರು ಸೇಡಿಯಾಪು ಕೃಷ್ಣಭಟ್ಟರ ಶಿಷ್ಯರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಎಂ. ಎ. ಪದವಿಯಲ್ಲಿ ಚಿನ್ನದ ಪದಕವನ್ನು ಪಡೆದುಕೊಂಡಿದ್ದಾರೆ. ಮುಂದೆ ಸಂತ ಅಲೋಶಿಯಸ್, ಸಂತ ಫಿಲಕೋಮಿನಾ ವಿವೇಕಾನಂದ ಕಾಲೇಜು ಪುತ್ತೂರಿನಲ್ಲಿ ಅಧ್ಯಾಪನ ವೃತ್ತಿಯನ್ನು ನಡೆಸಿದವರು. ನಿವೃತ್ತಿಯ ನಂತರ ಮಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಆಹ್ವಾನಿತ ಪ್ರಾಧ್ಯಾಪಕರಾಗಿ ಕೆಲವು ಕಾಲ ಕಾರ್ಯನಿರ್ವಹಿಸಿದ್ದಾರೆ.



ವಿದ್ಯಾರ್ಥಿಯಾಗಿದ್ದಾಗಲೇ ಸಾಹಿತ್ಯದಲ್ಲಿ ಆಸಕ್ತಿಯನ್ನು ಹೊಂದಿದ್ದ ಅಮೃತರು ತುಳುನಾಡಿನ ಸಂಸ್ಕೃತಿ ಮತ್ತು ಕಲೆಯ ಬಗೆಗೆ ವಿಶೇಷ ಒಲವನ್ನು ಹೊಂದಿದ್ದರು. ಕನ್ನಡ ಸಂಘ, ಯಕ್ಷಗಾನ ಸಂಘ ಇಂತಹ ಕೂಟಗಳನ್ನು ಆರಂಭಿಸಿ ತುಳು ಭಾಷೆಯ ಬೆಳವಣಿಗೆಗಾಗಿ ಶ್ರಮಿಸಿದ್ದಾರೆ. 1957ರಲ್ಲಿ ಬರೆದ ಎಲೆಗಿಳಿ ಎಂಬ ಸಣ್ಣ ಕಥೆ ಇವರ ಮೊದಲ ರಚನೆ. ಕಥಾ ಸಂಕಲನ, ಕವಿತೆ, ವಿಮರ್ಶೆ ಸಂಶೋಧನೆ, ನಾಟಕ, ಜಾನಪದ, ಅನುವಾದ, ಯಕ್ಷಗಾನ ಪ್ರಸಂಗ, ನೃತ್ಯ ರೂಪಕ, ಗಾದೆ, ಶಬ್ಧ ಕೋಶ, ವಿನೋದ ಕೋಶ, ಕಾದಂಬರಿ, ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳಿಗೆ ಅವರ ಕೊಡುಗೆ ಹಿರಿದಾದುದು. ಮನೆಮಾತು ಮೋಯ ಮಲೆಯಾಳವಾಗಿದ್ರೂ ಕನ್ನಡ ಹಾಗೂ ತುಳು ಭಾಷೆಯ ಸೇವೆಗಾಗಿ ಅವರನ್ನು ಮುಡಿಪಾಗಿಸಿಕೊಂಡಿದ್ದರು. ಇನ್ನು ಯಕ್ಷಗಾನ ಕ್ಷೇತ್ರಕ್ಕೆ ಅವರ ಕೊಡುಗೆ ಚಿರಸ್ಮರಣೀಯವೇ ಸರಿ. ಅನೇಕ ಯಕ್ಷಗಾನ ಕಮ್ಮಟಗಳನ್ನು ನಡೆಸಿದ್ದಾರೆ. ಯಕ್ಷಗಾನ ದಾಖಲೀಕರಣಕ್ಕೆ ಮೊದಲಾಗಿ ಮನಸು ಮಾಡಿದವರು. ತುಳು ಯಕ್ಷಗಾನದ ಪರವಾಗಿ ಧ್ವನಿ ಎತ್ತಿದ ಹಿರಿಯ ವಿದ್ವಾಂಸರಿವರು. ಕಾಯಕಲ್ಪ, ಸಹಸ್ರ ಕವಚ ಮೋಕ್ಷ, ತ್ರಿಪುರ ಮಥನ, ಇಂತಹ ಅನೇಕ ಪೌರಾಣಿಕ ಯಕ್ಷಗಾನಗಳಿಗೆ ಆಧುನಿಕ ಧ್ವನಿ ನೀಡಿದ ಪ್ರಯೋಗಶೀಲರು. ಕಲ್ಕುಡ, ಸಿರಿಯಂತಹ ಜಾನಪದ ಹೋರಾಟ ಪಾತ್ರಗಳಿಗೆ ಹೊಸ ದಿಸೆ ತೋರಿದವರು. ಅಮೃತರ ಮನೆಯ ಕಿಟಕಿಗಳಲ್ಲೂ ಯಕ್ಷಗಾನದ ಪುಂಡು ವೇಷ, ರಾಜ ವೇಷ, ಅಳುಪರ ರಾಜರ ಲಾಂಛನ–ಜೋಡಿ ಮೀನು, ಆಟಿ ಕಳೆಂಜ ಇಂತಹ ಯಕ್ಷಗಾನ, ತುಳುನಾಡಿನ ಸಂಸ್ಕೃತಿಯನ್ನು ಬಿಂಬಿಸುವಂತಹ ವಸ್ತುಗಳನ್ನು ನೋಡಬಹುದಾಗಿದೆ.

ಅಮೃತ ಸೋಮೇಶ್ವರರು ರಚಿಸಿದ ಯಕ್ಷಗಾನ ಪ್ರಸಂಗಗಳು– ಅಮರಶಿಲ್ಪ(1978), ಸಹಸ್ರ ಕವಚ ಮೋಕ್ಷ(೧೯೮೧), ಕಾಯಕಲ್ಪ(1982), ಮಹಾಶೂರ ಭೌಮಾಸುರ, ಮಹಾಕಲಿ ಮಗದೇಂದ್ರ, ತ್ರೀಪುರ ದಹನ, ಪೌಂಡ್ರಕ ವಾಸುದೇವ, ಆಚಾರ್ಯ ವಿಶ್ವರೂಪ, ಶಬ್ದವೇದಿ, ಆದಿಕವಿ ವಾಲ್ಮೀಕಿ, ದಂಭದಮನ, ಅಂಧಕಮೋಕ್ಷ, ಘೋರಮಾರಕ, ವೀರಕಲ್ಕುಡ, ಕಾಯಕಲ್ಪ, ಗಂಗಾವತರಣ, ಭುವನಭಾಗ್ಯ, ವಂಶವಾಹಿನಿ, ಚಂದ್ರಮತಿ ಸ್ವಯಂವರ, ಪಾದುಕ ಪ್ರದಾನ. ಯಕ್ಷಗಾನದ ಪ್ರಮುಖ ಕೃತಿಗಳು– ಯಕ್ಷಗಾನ ತೆಂಕು ತಿಟ್ಟು, ಯಕ್ಷಗಾನ ಮುಖಾಲಂಕಾರ, ಯಕ್ಷಗಾನ ಸಾಂಕೇತಿಕತೆ, ಯಕ್ಷಗಾನ ಸಮಾಲೋಚನೆ, ಯಕ್ಷಗಾನ ಸೂಚಿತ ವೇಷಗಳು, ಯಕ್ಷಗಾನದಲ್ಲಿ ಸಮತೋಲನ ತತ್ವ, ಯಕ್ಷಗಾನ ಸ್ವಾತಂತ್ರ್ಯೋತ್ತರ ಕಾಲದಲ್ಲಿ, ಯಕ್ಷಗಾನ ಶುದ್ಧಾಂಗವಾಗಿ ಧಾರ್ಮಿಕ ರೂಪವೇ?, ತುಳು ಯಕ್ಷಗಾನ, ಯಕ್ಷಗಾನ ಪ್ರಸಂಗ ಸೃಷ್ಟಿ, ಯಕ್ಷಗಾನ ವೇಷಭೂಷಣ, ನಂದಳಿಕೆಯವರ ಪ್ರಸಂಗಗಳು, ಸಮನ್ವಯ ಶೀಲ ಕಲೆ ಯಕ್ಷಗಾನ, ಬಣ್ಣದ ವೇಷ– ಪರಂಪರೆ ಮತ್ತು ಅವಿಷ್ಕಾರ, ಪಾರ್ತಿಸುಬ್ಬನ ಪ್ರಸಂಗಗಳ ಸಂವಿಧಾನ ವೈಶಿಷ್ಟ್ಯ, ಯಕ್ಷಗಾನದ ಪ್ರಸ್ತುತತೆ, ಯಕ್ಷಗಾನ ಸಮಾಲೋಚನೆ, ಯಕ್ಷಗಾನ ಛಂದೋವೈವಿಧ್ಯ ಸಮಗ್ರ ರಂಗಭೂಮಿ, ಯಕ್ಷಗಾನ ನೃತ್ಯದಲ್ಲಿ ನೂತನ ಅವಿಷ್ಕಾರಗಳು, ರತ್ನಾವತಿ ಕಲ್ಯಾಣ ಮತ್ತು ಕುಮಾರ ವಿಜಯ, ಯಕ್ಷಗಾನ ಕ್ಷೇತ್ರಕ್ಕೆ ಶ್ರೀ ಧರ್ಮಸ್ಥಳದ ಕೊಡುಗೆ, ಯಕ್ಷಗಾನದ ಪ್ರಭಾವ ಸಾಹಿತ್ಯದಲ್ಲಿ ಮತ್ತು ಜನ ಜೀವನದಲ್ಲಿ.

ಸಮಕಾಲೀನ ಚಿಂತನೆಗಳಿಗೆ ಪೂರಕವಾಗಿ ಯಕ್ಷಗಾನ ಪ್ರಸಂಗಗಳನ್ನು ರಚಿಸಿರುವುದು ಇವರ ಚಿಂತನಶೀಲತೆಗೆ ಸಾಕ್ಷಿಯಾಗಿದೆ. ಆರೋಗ್ಯ ಕ್ಷೇತ್ರದ ಸವಾಲಾಗಿರೋ ಏಡ್ಸ್ ಬಗೆಗಿನ ಜಾಗೃತಿಗಾಗಿ ಘೋರಮಾರಕ ಅನ್ನೋ ಪ್ರಸಂಗವನ್ನು ರಚಿಸಿದರು. ಯಕ್ಷಗಾನೀಯವಾದಂತಹ ಪಾತ್ರಗಳು, ಸನ್ನಿವೇಶಗಳು, ಪದ್ಯಗಳು ಈ ಪ್ರಸಂಗದ ಮೌಲ್ಯವನ್ನು ಹೆಚ್ಚಿಸಿವೆ. ಸಾಮಾಜಿಕ, ಐತಿಹಾಸಿಕ ಪೌರಾಣಿಕ, ಜಾನಪದೀಯ ಪ್ರಕಾರಗಳೊಂದಿಗೆ ಜಾಗೃತಿಗಾಗಿ ಶೈಕ್ಷಣಿಕವಾಗಿರುವಂತಹ ಪ್ರಸಂಗ ಪ್ರಕಾರ ಹೊಸ ಸೇರ್ಪಡೆ ಎಂದು ಭಾವಿಸಬಹುದು. ಪೌರಾಣಿಕ ಶೈಲಿಯದೇ ಸನ್ನಿವೇಷಗಳು ಶಿವ, ನಾರದ ಮೊದಲಾದ ಪಾತ್ರಗಳು ಪ್ರಸಂಗದಲ್ಲಿ ಬರುತ್ತವೆ. ಘೋರಮಾರಕ, ರುಜಿನಾಸುರ, ಭದ್ರಾಂಗ, ಶುಭ್ರಾಂಗ, ಕುಷ್ಠಾಸುರ, ಕ್ಷಯಾಸುರ, ವೈದ್ಯ, ಶಿವಭೂತಿ, ರೋಗಮುಖಿ, ರಾಗಮುಖಿ, ಶೀತಮುಖಿ, ಪಿತ್ಥಮತಿ ಕಫಶೀಲೆ, ಹೀಗೆ ಖಾಯಿಲೆಗಳನ್ನು ಅಸುರೀ ಪಾತ್ರಗಳಾಗಿ ಚಿತ್ರಿಸಲಾಗಿದೆ. ಹಾಗೆಯೇ ಪ್ರಸಂಗದಲ್ಲಿ ಬರೋ ಊರುಗಳು, ಸರ್ವಾರಿಷ್ಠಪುರ, ಶೃಂಗಾರಪುರ ಯಕ್ಷಗಾನದ ಸೀಮೆಗೆ ಒಳಪಡುವಂತೆಯೇ ಚಿತ್ರಿಸಲಾಗಿದೆ.

***ಘೋರ ಮಾರಕ ಪ್ರಸಂಗದ ಕೆಲವು ಪದ್ಯಗಳು***

ಘೋರ ಮಾರಕನ ಉದ್ಭವ

ಭೂರಿ ಭೀಕರ ದಂಷ್ಟ್ರ ಚಾಚಿದ। ಘೋರ ರಕ್ಕಸ ಕಣ್ಣ ಕೆಂಡವ।

ಕಾರುತಾರ್ಭಟಿಸುತ್ತ ರೌದ್ರಾ । ಕಾರದಿಂದ
ಪ್ರಕಟನಾಗುತ ಮಣಿದು ಮಾರಾಂ।
ತಕನೊಳೆಂದನು ಸೃಷ್ಟಿಸಿದಿರೇ।
ತಕೆಯೆನಲು ಭೂತೇಶನೆಂದನು ವಿಕಟ ಮುಖಿಗೆ॥೫॥

***ಅಭೇರಿ ರೂಪ***

ಈ ರೀತಿಯೊಳು ರೋಗಮುಖಿಯು ಶೃಂಗಾರ ವೈ। ಯಯಾರದಿ ಮುಂಗಡೆಗೈದೆ॥
ಮಾರಕಾಸುರ ಕಂಡು ಬೆರಗಾದ ಚಿತ್ತಾಪ। ಹಾರವಾಯ್ತಿವಳಿಂದಲೆನುತ॥
ಆರು ನೀನೆಲೆ ನೀರೆಯೋರ್ವಳೇನಿಹೆ ನಿನ್ನ। ಊರೆಲ್ಲಿ ದಾತಾರರಾರು
ತಾರುಣ್ಯವುಕ್ಕುವ ರಮಣಿ ನೀನೀ ಪರಿ। ಭೋರನೆ ಪೊರಟಿಹುದೆಲ್ಲಿ॥

***ಕಾಂಭೋಜಿ ಏಕ***

ಪುರುಷರತ್ನ ಲಾಲಿಸಯ್ಯ। ವರ ಸರ್ವಾರಿಷ್ಟಪುರದ।
ದೊರೆ ರುಜಿನಾಸುರ ಸೋ। ದರಿಯು ರೋಗಮುಖಿ॥
ಎನ್ನ ಮನಕೆ ಒಪ್ಪುವಂಥ। ಚೆನ್ನ ವರನನರಸುತ ಸಂ।
ಪನ್ನರನ್ನು ಕಾಣದಿರಲು। ನಿನ್ನ ಕಂಡೆನು
ಸಕಲ ವಿಧದಿ ನೀನೆ ಮನಕೆ। ಸುಖವನೀವ ಪುರುಷನಹುದು।
ಯುಕುತವಾಘೆ ಕರವ ಪಿಡಿದು। ಸುಖಿಸು ಸುಮುಖನೆ॥

***ಅಮೃತರು ಬರೆದ ಐತಿಹಾಸಿಕ ಪ್ರಸಂಗ ಚಾಲುಕ್ಯ ಚಕ್ರೇಶ್ವರ ಪ್ರಸಂಗದ ಒಂದು ಪದ್ಯ ವಿಷ್ಣುವರ್ಧನನ ವಿಹಾರ***

***ಬೇಹಾಗ್ – ಏಕತಾಳ***

ಒಂದು ದಿನದಿ ನದಿಕೂಲದೆಡೆಗೆ ಆ। ನಂದದಿ ನಿಜಸಖರೊಡಗೂಡಿ।
ಚೆಂದದಿ ಕುಬ್ಜ ವಿಹಾರಕೆ ಪೊರಟಿರೆ। ಕಂದುಕ ಕ್ರೀಡೆಯನಾಡಲ್ಕೆ।
ಆ ಸಮಯದಿ ನವ ತಾರುಣ್ಯದ ಸುವಿ । ಲಾಸದಿ ರಂಜಿಪ ತರುಣಿಯರು।
ತೋಷದಿ ಜಲಕ್ರೀಡೆಯೊಳಿರೆ ವಿಭ್ರಮ । ಸೂಸುತ ಹಾಸ ವಿಲಾಸದಲಿ
ಈಜುವ ಮೋದದ ರಾಜವದನೆಯರ। ರಾಜ ತನೂಜನು ತಾ ಕಂಡು
ಸಾಜದಿ ಸಂಭ್ರಮಗೊಳ್ಳುತಲಹ ಬಲು । ಮೋಜಾದುದು ಶುಭ ದಿನವಿಂದು॥
ದೇಶಿ ಅಷ್ಟ
ಆಹ ನೋಡಿರೋ ನೀರಿನೊಳಾಡುವ। ಮೋಹನೆಯರುಲ್ಲಾಸ ಕ್ರೀಡೆಯ।
ಮೋಹಕತ್ವ ಸವಿಯಿರೋ॥
ಮೀನನೇತ್ರೆಯರಾನಂದದಲಿ। ಮೀನಕೇತನನಾನೆನಗಳ ತೆರ।
ವೇನು ನಲಿಯುತಲಿರ್ಪರೋ॥
ನೀರ ತೊರೆದೆದ್ದು ನಾರಿಯರ್ ಬರಲಾಗ। ಭೋರನಾಕ್ರಮಿಸುತ್ತ ತೋಷದಿ।
ಸಾರಿಯಪ್ಪುತ ರಮಿಸುವ॥

***ತ್ರಿಪುರ ಮಥನದ ಸುಂದರವಾದ ಒಂದು ಸಾಹಿತ್ಯ***

ಎನಲು ಪೇಳ್ದನು ನಗುತ ಚಾರ್ವಾಕ। ಸಂತೋಷವಾದುದು। ವನಿತೆ ಕೇಳಿದು ಬಳ ರಸಪಾಕ।
ತನುಮನದ ಸುಖವೆಂಬುದಿದೆ ಜೀ। ವನದ ಘನಗಂತ್ಯವ ಸುಖ ಭೋ।
ಜನ ಶಯನ ರಸಪಾನ ಗಾನವು। ಕುಣಿತವೀ ಭೋಗಗಳೇ ಸ್ವರ್ಗವು॥
ಭಕ್ತಿವ್ರತ ಮುಕ್ತಿಗಳ ಮರುಳುಗಳ। ಬೇರಿಂಗೆ ಬೆನ್ನೀ।
ರಿತ್ತು ಚಿಂತಿಪುದೈಗಹಿಕದ ತಿರುಳ॥
ಮುಕ್ತಿಯೆಂಬುದು ಭ್ರಮೆಯು ಸತ್ತರೆ। ಮತ್ತೆ ಶೂನ್ಯವು ಬಾಳ ಭೋಗದ।
ತುತ್ತ ನೆರೆ ಚಪ್ಪರಿಸುತಿಂದ್ರಿಯದ। ತೃಪ್ತಿಯಲಿ ಸಾರ್ಥಕತೆ ಸಾರ್ವುದು॥೨॥
ಸತಿಗೆ ಪರಿ ಪರದೈವವೆಂಬುದಿದು। ಪೆಣ್ಗಳನು ವಂಚಿಪ।
ಮತಿವಿಕಳರಾಲಾಪ ವಿಕಟವಿದು। ಹಿತದಿ ಪತಿಸುಖವೊದಗದಿರಲಾ।
ಸತಿಯು ಮನಬಂದವಗೆ ತನುವ।
ರ್ಪಿತಗೊಳಿಸಿ ಸೊಗವೀಂಟುವುದೇ ಸ।
ನ್ಮತವು ಮನ್ಮಥ ಮಂತ್ರ ಸಿದ್ಧಯು॥೪॥

ಅಮೃತ ಸೋಮೇಶ್ವರರ ಪದ್ಯಗಳಲ್ಲಿ ಸಾಹಿತ್ಯಗಳಲ್ಲಿನ ಸಮಾಜದ ನೈಜತೆ ಹಾಗೂ ತಾತ್ವಿಕ ಚಿಂತನೆ ಓದುಗರನ್ನು ಯೋಚನಾಪರರನ್ನಾಗಿ ಮಾಡುವಂಥದು.

***ಅವರ ನಾಟಕದ ಪದ್ಯಗಳೂ ಕೂಡಾ ಛಂದಸ್ಸಿನ ಪ್ರಕಾರದಲ್ಲಿಯೇ ರಚಿತವಾಗಿದ್ದು ಸಾಹಿತ್ಯಾಸಕ್ತರ ಮನಸೂರೆಗೊಳ್ಳುತ್ತವೆ. ಅವರ ಪ್ರಸಿದ್ಧ ತುಳು ನಾಟಕ ಗೋಂದೋಳು ಇದರ ಒಂದು ಮಾರ್ಮಿಕ ಸಾಹಿತ್ಯ ಹೀಗಿದೆ..***

***ತ್ರಿಪದಿ – ತೋಡಿ ಅಷ್ಟ ತಾಳ***

ತೋಜಂದೆ ಕಣ್ಣ್‌ಗ್ ಮಾಯೊದ ಕೈಗುಣ।
ತೋಜಾಪಿ ಮೈಮೆದ ದೈವೊನೆ। ನಡುಟುಂತು।
ಬೀಜುಂಡು ಪೊತ್ತುನ ಜೇಟಿಗೆನ್॥೧॥
ಪೊರ್ಲುದ ತೋಟೊಗು ಅರ್ಲುಗೆಂಡದ ಬಸ್ರೊ।
ಕರ್ಲ್‌ಗ್ ಕಂತ್‌ದಿ ಕಾಮೊದ। ಪಗರಿಡ್।
ನರ್ಲುಂಡು ಲೋಕೊನೆ ತಡೆವಂದೆ॥೨॥
ಒರಿಯಗ್ ಕಣನೀರ್ ಒರಿಯಗ್ ಪನ್ನೀರ್।
ಒರಿಯನ ಇಲ್ಲಲ್ ಪುದ್ವಾರ್। ಬುಕ್ಕೊರ್ಯೆ।
ಬರೆಲುವೆ ಪಾರಿ ಪಣ್ಬುನೆ ಏರ್॥೩॥
ಪಾಯೊಸ ಪಾತ್ರೊಗು ಪೊಯ್ಯೆ ಪೇರ್‌ಗ್ ಪುಳಿ
ಪಾಯಾತಿ ಕಂಡೊಗು ಪಂಜಿಯಾದ್। ಬೂರುನ।
ಮಾಯೊದ ಪಜ್ಜೆ ತೆರಿಯಂದ್॥೪॥

***ಕೇದಾರ ಅಷ್ಟ ತಾಳ***

ಮೂಜಿ ದಿನೊತ ಕೆಡ್ಡಸದ ಗಾಳಿ ರುಮುರುಮು।
ಬೀಜೊಂದು ಬರ್ಪುಂಡೆ ಮೂಡಯಿಡ್ದ್॥
ಆಜಂದಿ ಬಾಜೆಲ್ ಗಾಳಿಗ್, ಭೂಮಿಗ್
ಮೂಜಿ ದಿನೊತ ಸೂತಿಗಾತ್‌ಂಡ್॥

***ಡಾ ಅಮೃತ ಸೋಮೇಶ್ವರ ಅವರ ಪ್ರಮುಖ ಕೃತಿಗಳಲ್ಲಿ,***

ಸಣ್ಣ ಕಥಾ ಸಂಕಲನ–ರುದ್ರಶಿಲೆ ಸಾಕ್ಷಿ, ಕೆಂಪು ನೆನಪು, ಮಾನವತೆ ಗೆದ್ದಾಗ ಮತ್ತು ಇತರ ಕಥೆಗಳು. ಕವನ ಸಂಕಲನ–ವನಮಾಲೆ (1975), ಭ್ರಮಣ (1974), ಜ್ಯೋತಿ ದರ್ಶನವಾಯಿತು (1989), ಉಪ್ಪುಗಾಳಿ (1992), ಕರೆಗಾಳಿ. ಕಾದಂಬರಿ–ತೀರದ ತೆರೆ (1974), ರೇಡಿಯೋ ರೂಪಕ, ವಿಶ್ವರೂಪ (1982). ನಾಟಕ ಕೃತಿಗಳು–ಕೋಟಿ ಚೆನ್ನಯ್ಯ (1982), ವೀರರಾಣಿ ಅಬ್ಬಕ್ಕದೇವಿ (2015), ಗೋಂದೋಳು (1982). ನೃತ್ಯರೂಪಕಗಳು–ಸಪ್ತ ಮಾತೃಕೆಯರು (1990), ಸತ್ಯನಾಪುರತ ಸಿರಿ, ಬಲಿ ಚಕ್ರವರ್ತಿ (1990), ನಿಸರ್ಗ ವಿಜಯ (1992), ಸಂಭವಾಮಿ ಯುಗೇಯುಗೇ (1992), ಸಹನಾ ಸಂದೇಶ (1995), ನಾಟ್ಯವೇದ, ಕರ್ಣವೇದ, ಛಲದಂಕೆ ಅಂಬೆ, ಭರತಗಾಥಾ. ವ್ಯಕ್ತಿಚಿತ್ರ–ಬಡೆಕ್ಕಿಲ ವೆಂಕಟರಮಣ ಭಟ್ಟರ ಜೀವನ ಮತ್ತು ಕೃತಿಗಳು, ಮಹನೀಯ ಚೇತನಗಳು, ಸಹ ಸಂಪಾದನೆ, ನಾಟ್ಯಮೋಹನ, ಆಮ್ಮೆಂಬಳ ಆರುವತ್ತು. ಸಂಪಾದನೆ–ಸುಂದರಕಾಂಡ, ಅಬ್ಬಕ್ಕ ಸಂಕಥನ, ವಜ್ರಕಾಯ, ಯಕ್ಷಗಾನಗಂಗೋತ್ರಿ. ಸ್ವತಂತ್ರ ಗಾದೆಗಳು–ಸಿಂಗಾರ ಗಾದೆಗಳು (1987), ಕುಚೋದ್ಯ ಕೋಶ, ಆಪಾರ್ಥಿನೀ. ಸಂಸ್ಕೃತಿ ಚಿಂತನೆ, ಭಗವತಿ ಆರಾಧನೆ, ಮೋಯ ಮಲಯಾಳ ಕನ್ನಡ ಪದಕೋಶ, ವಚನ ಸಾಹಿತ್ಯ, ಹೃದಯ ವಚನಗಳು.

ಅವಿಲು (1978), ತುಳು ಬದುಕು (1984), ತುಳು ಪಾಡ್ದನ ಕಥೆಗಳು (1962), ಬಾಮಾಕುಮಾರ ಸಂದಿ (1978), ಕೊರಗರು (1978), ತುಳು ಸಂಸ್ಕೃತಿಯ ಮುಂದಿನ ಸಂಶೋಧನೆ, ತುಳುಜಾನಪದದ ಕೆಲವು ನೋಟ (2007). ಇನ್ನು ಇವರ ರಚನೆಯ ಕನ್ನಡ ತುಳು ಪದ್ಯಗಳ 60ಕ್ಕೂ ಮಿಕ್ಕಿ ಧ್ವನಿ ಸುರುಳಿ ಬಿಡುಗಡೆಯಾಗಿವೆ.

# ಕಣಿಪುರ ಶ್ರೀ ಗೋಪಾಲಕೃಷ್ಣ ಕೃಪಾಪೋಷಿತ ಯಕ್ಷಗಾನ ಮಂಡಳಿ, ಕುಂಬ್ಳೆ ಮೇಳದ ಇತಿಹಾಸ

ಮೇಳಗಳ ಇತಿಹಾಸದಲ್ಲಿ ಕುಂಬ್ಳೆ ಮೇಳವು ಅತ್ಯಂತ ಪ್ರಾಚೀನ ಮೇಳವಾಗಿದೆ. ಸುಮಾರು 1700ರ ಕಾಲದಲ್ಲೇ ಕುಂಬ್ಳೆ ಮೇಳವು ಅಸ್ತಿತ್ವದಲ್ಲಿ ಇತ್ತು ಎಂಬ ಐತಿಹ್ಯವಿದೆ. ತೆಂಕುತಿಟ್ಟಿನ ಹೆಚ್ಚಿನ ಎಲ್ಲಾ ಸುಪ್ರಸಿದ್ಧ ಯಕ್ಷಗಾನ ಕಲಾವಿದರು ಕುಂಬ್ಳೆ ಪರಿಸರದವರೇ ಆಗಿರುವುದು ಗಮನಾರ್ಹ. ಯಕ್ಷಗಾನದಲ್ಲಿ ಶಾಸ್ತ್ರೀಯತೆಯನ್ನು ಅಳವಡಿಸಿ ಹಾಗೂ ಅಮೂಲಾಗ್ರ ಸುಧಾರಣೆಯನ್ನು ತಂದ "ಯಕ್ಷಗಾನದ ಪಿತಾಮಹ" ಎನಿಸಿದ ಪಾರ್ತಿಸುಬ್ಬರೂ ಕುಂಬ್ಳೆಯವರೇ ಆಗಿದ್ದಾರೆ.

ಸುಮಾರು 1700-1800ರ ಶತಮಾನದಲ್ಲೇ ಕುಂಬ್ಳೆ ಮೇಳವು ತನ್ನ ತಿರುಗಾಟ ನಡೆಸುತ್ತಿತ್ತು ಎಂಬುದನ್ನು ಪಾರ್ತಿಸುಬ್ಬರ ಜೀವನ ಚರಿತ್ರೆ ಓದುವಾಗ ಪುಷ್ಟಿ ಸಿಗುತ್ತದೆ. ಕೇರಳದ ಪ್ರಸಿದ್ಧ ಕಲೆಯಾದ ಕಥಕ್ಕಳಿಯನ್ನು ಅಭ್ಯಸಿಸಿ, ಕಥಕ್ಕಳಿಯ ಭಾಗವತರಾಗಿ ಪಾರ್ತಿಸುಬ್ಬ ಸೇವೆ ಸಲ್ಲಿಸಿದ್ದರು. ನಂತರ ಯಕ್ಷಗಾನದಲ್ಲಿ ಸುಧಾರಣೆ ತಂದು ಈಗಿನ ಯಕ್ಷಗಾನದ ಜನಕ ಎನಿಸಿದ್ದರು. ಕೇರಳದಿಂದ ತಮ್ಮ ಹುಟ್ಟೂರಾದ ಕುಂಬ್ಳೆಗೆ ಬಂದ ಪಾರ್ತಿಸುಬ್ಬರು ಕುಂಬ್ಳೆ ಮೇಳದಲ್ಲಿ ಭಾಗವತರಾಗಿ ಸೇವೆ ಸಲ್ಲಿಸಿದ್ದರು. ಅಂದರೆ, ಆ ಕಾಲದಲ್ಲೇ ಕುಂಬ್ಳೆ ಮೇಳವು ಅಸ್ತಿತ್ವದಲ್ಲಿ ಇತ್ತು ಎಂದ ಹಾಗಾಯಿತು. ಅಂದಿನ ಕುಂಬ್ಳೆ ಮೇಳದಲ್ಲಿ ಸುಪ್ರಸಿದ್ಧ ಯಕ್ಷಗಾನ ಕಲಾವಿದರ ಗಡಣವೇ ಇತ್ತು ಎಂಬ ಸುದ್ದಿ ಇದ್ದರೂ, ಆ ಕಲಾವಿದರು ಯಾರು ಎಂಬುದರ ಬಗ್ಗೆ ಮಾಹಿತಿ ಇಲ್ಲ. ಅಂತೂ ಕುಂಬ್ಳೆ ಮೇಳವು ಇತ್ತೆಂಬುದು ನಿರ್ವಿವಾದ. ಯಕ್ಷಗಾನದಲ್ಲಿ ಭಾಗವತರೇ ಒಂದನೇ ವೇಷಧಾರಿಯಾದ ಕಾರಣ ಹಾಗೂ ಯಕ್ಷಗಾನದ ನಿರ್ದೇಶಕ ಎನಿಸಿದ ಪಾರ್ತಿಸುಬ್ಬರೇ ಕುಂಬ್ಳೆ ಮೇಳದ ಭಾಗವತರಾಗಿದ್ದ ಕಾರಣ, ಆ ಕಾಲದಲ್ಲಿ ಕುಂಬ್ಳೆ ಮೇಳವು ಜನಾಕರ್ಷಣೆಯ ಮೇಳವಾಗಿತ್ತು ಎಂದು ಧೈರ್ಯದಿಂದ ಹೇಳಬಹುದು.



ನಂತರದಲ್ಲಿ, 20ನೇ ಶತಮಾನದ ಮಧ್ಯದಲ್ಲಿ ಕೋಟ್ಯಣ್ಣ ಆಳ್ವ ಎಂಬವರು ಕುಂಬ್ಳೆ ಮೇಳ ಹೊರಡಿಸಿದ್ದರು ಎಂಬ ಸುದ್ದಿಯಿದ್ದರೂ, ಅಂದಿನ ಕಾಲದಲ್ಲಿ ಕುಂಬ್ಳೆ ಮೇಳದಲ್ಲಿ ತಿರುಗಾಟ ಮಾಡಿದ ಕಲಾವಿದರ ಮಾಹಿತಿಯಿಲ್ಲ. ಇದಕ್ಕಿಂತ ಮೊದಲೂ ಅಥವಾ ನಂತರವೂ ಕುಂಬ್ಳೆ ಮೇಳದ ಅಸ್ತಿತ್ವ ಇದ್ದಿರಬಹುದಾದರೂ, ಯಾವುದೇ ಖಚಿತವಾದ ದಾಖಲೆಯಿಲ್ಲ. ನಂತರದಲ್ಲಿ 20ನೇ ಶತಮಾನದ ಕೊನೆಯ ಕಾಲಘಟ್ಟದಲ್ಲಿ ಸುಪ್ರಸಿದ್ಧ ಯಕ್ಷಗಾನ ಕಲಾವಿದರಾಗಿರುವ ಕೆ. ಎಚ್. ದಾಸಪ್ಪ ರೈಯವರು 1984-85ರಲ್ಲಿ ಮಗದೊಮ್ಮೆ ಕುಂಬ್ಳೆ ಮೇಳವನ್ನು ಹೊರಡಿಸಿದರು. ದಾಸಪ್ಪ ರೈಯವರು ಉತ್ತಮ ವೇಷಧಾರಿ, ಸಂಘಟನಾ ಚಾತುರ್ಯ ಹೊಂದಿದವರು ಹಾಗೂ ಸಜ್ಜನಿಕೆಯ ವ್ಯಕ್ತಿ. ಅವರು "ಣಿಪುರ ಶ್ರೀ ಗೋಪಾಲಕೃಷ್ಣ ಕೃಪಾಪೋಷಿತ ಯಕ್ಷಗಾನ ಮಂಡಳಿ,ಕುಂಬ್ಳೆ" ಎಂಬ ಹೆಸರಿನಿಂದ ಸುಸಜ್ಜಿತವಾಗಿ ಹೊಸ ಡೇರೆ, ಸ್ವಂತ ಲಾರಿ, ಸ್ವಂತ ಟೆಂಪೋ, ಹೊಸ 1200 ಸುಖಾಸೀನ, ಭವ್ಯ ರಂಗಸ್ಥಳದೊಂದಿಗೆ ಕುಂಬ್ಳೆ ಮೇಳ ಹೊರಡಿಸಿದರು. ಆದರೆ, ಜನಪ್ರಿಯ ಎನಿಸಿದ್ದ ಕುಂಬ್ಳೆ ಮೇಳವು ಕೇವಲ ಆರೇ ವರ್ಷದಲ್ಲಿ ತನ್ನ ತಿರುಗಾಟ ಸಮಾಪ್ತಿಗೊಳಿಸಿದ್ದುದು ಯಕ್ಷಗಾನದ ಇತಿಹಾಸದಲ್ಲಿಯ ದುರಂತ ಎನ್ನಬಹುದು. ಉತ್ತಮ ಪ್ರಸಂಗ, ಅತ್ಯುತ್ತಮ ಕಲಾವಿದರ ಸೇರ್ಪಡೆ, ಉತ್ತಮ ವ್ಯವಸ್ಥಾಪಕತ್ವ ಹಾಗೂ ಸುಸಜ್ಜಿತ ವ್ಯವಸ್ಥೆ ಹೊಂದಿಯೂ ಕುಂಬ್ಳೆ ಮೇಳವು ದೀರ್ಘ ಕಾಲ ತಿರುಗಾಟ ನಡೆಸುವಲ್ಲಿ ಸೋತಿತು ಎನ್ನುವಲ್ಲಿ ವಿಧಿಯೇ ಪ್ರಧಾನ ಪಾತ್ರ ವಹಿಸಿತ್ತು ಎನ್ನುವುದು ವಿಷಾದನೀಯ. ದಾಸಪ್ಪ ರೈಯವರು ಪ್ರಥಮ ವರ್ಷದ ಕುಂಬ್ಳೆ ಮೇಳದ ತಿರುಗಾಟದಲ್ಲಿ ಸುಪ್ರಸಿದ್ಧ ಕಲಾವಿದರನ್ನೇ ಆರಿಸಿಕೊಂಡರು. ಪ್ರಥಮ ವರ್ಷದ ತಿರುಗಾಟದಲ್ಲಿ ಬಡಗು ತಿಟ್ಟಿನ ಸುಪ್ರಸಿದ್ಧ ಕಲಾವಿದರಾದ ಐರೋಡಿ ಗೋವಿಂದಪ್ಪ, ಹಳ್ಳಾಡಿ ಜಯರಾಮ ಶೆಟ್ಟಿ ಸಹಿತ ಅಡ್ಕಸ್ಥಳ ನಾರಾಯಣ ಶೆಟ್ಟಿ, ಕುಂಬ್ಳೆ ಆನಂದ, ಬಜಾಲ್ ಜನಾರ್ದನ, ಡಿ.ಸಂತೋಷ್ ಕುಮಾರ್, ತೊಡಿಕಾನ ಪದ್ಮನಾಭ, ಆನಂದ ಪುರುಷ ಮೊದಲಾದ ಕಲಾವಿದರಿದ್ದರೆ, ಸ್ತ್ರೀ ಪಾತ್ರದಲ್ಲಿ ತೊಡಿಕಾನ ವಿಶ್ವನಾಥ ಗೌಡ, ಸತೀಶ್ ಮಂಗಳಾಗರ್ (ಸುಪ್ರಸಿದ್ಧ ಸ್ತ್ರೀ ಪಾತ್ರಧಾರಿ ಎಂ.ಕೆ.ರಮೇಶ ಆಚಾರ್ಯರ ತಮ್ಮ), ಭಾಗವತಿಕೆಯಲ್ಲಿ ಸರಪಾಡಿ ಶಂಕರನಾರಾಯಣ ಕಾರಂತ, ಚೆಂಡ ಮದ್ದಲೆ ವಾದನದಲ್ಲಿ ಕಾಸರಗೋಡು ವೆಂಕಟರಮಣ, ಲಕ್ಷ್ಮೀಶ ಅಮ್ಮಣ್ಣಾಯ, ಪೆರುವಾಯಿ ಕೃಷ್ಣ ಭಟ್ ಮುಂತಾದ ಘಟಾನುಘಟಿಗಳಿದ್ದರು. ಆ ವರ್ಷ "ಯಕ್ಷರಂಗದ ಭೀಷ್ಮ" ಎನಿಸಿದ ಡಾ.ಶೇಣಿ ಗೋಪಾಲಕೃಷ್ಣ ಭಟ್ ರಚಿಸಿದ "ಕಣಿಪುರ ಕ್ಷೇತ್ರ ಮಹಾತ್ಮೆ" ಹಾಗೂ ಇತ್ತೀಚೆಗೆ ಕಟೀಲಿನಲ್ಲಿ ರಂಗಸ್ಥಳದಲ್ಲೇ ನಿಧನರಾದ ದಿ.ಗುರುವಪ್ಪ ಬಾಯಾರುರವರು ರಚಿಸಿದ ತುಳು ಪ್ರಸಂಗ "ವಜ್ರಕೋಗಿಲೆ" ಪ್ರಸಂಗ ಯಶಸ್ವಿಯಾಗಿ ಪ್ರದರ್ಶನ ನೀಡಿತು. ಆದರೆ, ದುರದೃಷ್ಟವಶಾತ್ ಆ ವರ್ಷದಲ್ಲಿ ಎಲ್ಲಾ ಮೇಳಗಳಿಗೂ ದೊಡ್ಡದಾದ ಆತಂಕ ಎದುರಾಯಿತು. ಅದುವೇ, ದಕ್ಷಿಣಕನ್ನಡ ಜಿಲ್ಲೆಯನ್ನೇ ತಲ್ಲಣಗೊಳಿಸಿದ "ರಿಪ್ಪರ್ ಚಂದ್ರನ್" ಪ್ರಕರಣ. ಚಂದ್ರನ್ ಎಂಬಾತನು ರಾತ್ರಿಯಲ್ಲಿ ಮನೆಮನೆಗೆ ನುಗ್ಗಿ ಅಮಾಯಕರ ತಲೆಗೆ ಹೊಡೆದು ದರೋಡೆ ಮಾಡುತ್ತಿದ್ದ ಪ್ರಕರಣವಿದು. ಆದ ಕಾರಣ, ದಕ್ಷಿಣಕನ್ನಡ ಜಿಲ್ಲೆಯಲ್ಲಿ ಯಾರೂ ರಾತ್ರಿ ಮನೆ ಬಿಟ್ಟು ಹೊರಗೆ ಬಾರದ ಭಯಾನಕ ಪರಿಸ್ಥಿತಿ. ಈ ಚಂದ್ರನ್ ನ ಹಾವಳಿ ನೇರವಾಗಿ ತಟ್ಟಿದ್ದು ಯಕ್ಷಗಾನದ ಡೇರೆ ಮೇಳಗಳಿಗೆ. ಎಲ್ಲಾ ಮೇಳಗಳಿಗೂ ಪ್ರೇಕ್ಷಕರೇ ಇಲ್ಲದೇ ಕಲೆಕ್ಷನ್ ಇಲ್ಲದ ಪರಿಸ್ಥಿತಿ. ಹೊಸದಾಗಿ ತಿರುಗಾಟ ನಡೆಸುವ ಉತ್ಸಾಹದಲ್ಲಿದ್ದ ಕುಂಬ್ಳೆ ಮೇಳವೂ ಇದಕ್ಕೆ ಹೊರತಾಗಲಿಲ್ಲ. ಘಟ್ಟ ಪ್ರದೇಶಗಳಲ್ಲಿ ಚಂದ್ರನ್ ನ ಹಾವಳಿ ಇಲ್ಲದ ಕಾರಣ, ಆ ಕಾಲದಲ್ಲಿ ಹೆಚ್ಚಿನ ಎಲ್ಲಾ ಡೇರೆ ಮೇಳಗಳು ದಕ್ಷಿಣ ಕನ್ನಡ ಬಿಟ್ಟು ಘಟ್ಟ ಪ್ರದೇಶಗಳಲ್ಲಿ ಯಕ್ಷಗಾನ ಪ್ರದರ್ಶನ ನೀಡಲಾರಂಭಿಸಿದವು. ಆದರೆ, ಕುಂಬ್ಳೆ ಮೇಳವು ಹೊಸ ಮೇಳವಾದ ಕಾರಣ, ಕಂಟ್ರಾಕ್ಟ್ ಗಳು ಹೆಚ್ಚು ದಕ್ಷಿಣಕನ್ನಡ ಜಿಲ್ಲೆಯಲ್ಲೇ ಮೊದಲೇ ಬುಕ್ಕಿಂಗ್ ಆಗಿದ್ದುದರಿಂದ ಘಟ್ಟ ಪ್ರದೇಶಕ್ಕೆ ಹೋಗದೇ, ದಕ್ಷಿಣಕನ್ನಡ ಜಿಲ್ಲೆಯಲ್ಲೇ ತಿರುಗಾಟ ನಡೆಸಬೇಕಾದ ಅನಿವಾರ್ಯತೆ. ಕಲೆಕ್ಷನ್ ಇಲ್ಲದೇ, ಕಂಟ್ರಾಕ್ಟ್ ದಾರರೂ ಬಳಲಿದ್ದು, ಮೇಳಕ್ಕೆ ನಿಗದಿ ಪಡಿಸಿದ ವೀಳ್ಯ ಸಿಗದೇ ಹೋಯಿತು. ಆದುದರಿಂದ ದಾಸಪ್ಪ ರೈಯವರಿಗೆ ಪ್ರಥಮ ವರ್ಷ ನಷ್ಟವೇ ಆಯಿತು. ಆದರೂ, ಪ್ರಥಮ ವರ್ಷದ "ವಜ್ರಕೋಗಿಲೆ" ಪ್ರಸಂಗ ಮಾತ್ರ ಅದ್ಭುತ ಯಶಸ್ಸನ್ನು ಕಂಡಿತು. ಮುಂದಿನ ವರ್ಷದ ತಿರುಗಾಟದಲ್ಲೂ ಪ್ರೇಕ್ಷಕರು ಈ ಪ್ರಸಂಗವನ್ನೇ ಆಯ್ಕೆ ಮಾಡುವಂತಾಯಿತು. ಎರಡನೇ ವರ್ಷದ ತಿರುಗಾಟದಲ್ಲಿ ಭಾಗವತಿಕೆಗೆ ಕಾರಂತರೊಂದಿಗೆ ಸುಪ್ರಸಿದ್ಧ



ಎಂ. ಶಾಂತರಾಮ ಕುಡ್ವ

ಸ್ತ್ರೀ ಪಾತ್ರಧಾರಿಯಾಗಿದ್ದ ಶ್ರೀಧರ್ ಹೆಬ್ಬಾರ್ ರು ಭಾಗವತರಾಗಿ ಭಡ್ತಿ ಹೊಂದಿ ಕುಂಬ್ಳೆ ಮೇಳ ಸೇರಿದರು. ಎರಡನೇ ವರ್ಷದ ತಿರುಗಾಟದಲ್ಲಿ ಈ ಮೊದಲೇ ಇದ್ದ ಕಲಾವಿದರೊಂದಿಗೆ ಮೂಡುಬಿದಿರೆ ಮಾಧವ ಶೆಟ್ಟಿ, ಸ್ತ್ರೀ ಪಾತ್ರಧಾರಿ ರತ್ನಾಕರ ಶೆಟ್ಟಿ ಮುಂತಾದ ಕಲಾವಿದರ ಸೇರ್ಪಡೆಯಾಯಿತು. ಆ ವರ್ಷ ಗುರುವಪ್ಪ ಬಾಯಾರರು ರಚಿಸಿದ "ಕೀರ್ತಿ ಚಂದ್ರಿಕೆ", ರಘು ಗುರುಪುರದವರ "ವಜ್ರಜ್ಯೋತಿ" ಪ್ರಸಂಗಗಳು ಯಶಸ್ವಿಯಾಗಿ ಪ್ರದರ್ಶಿತಗೊಂಡಿತು. ಈ ತಿರುಗಾಟದಲ್ಲಿ ಮೇಳದ ಲಾರಿ ಅಪಘಾತಕ್ಕೀಡಾದ ಕಾರಣ ಮೇಳಕ್ಕೆ ದೊಡ್ಡ ಹೊಡೆತ ಬಂತು. ಈ ವರ್ಷದ ತಿರುಗಾಟದಲ್ಲಿ, ಚಂದ್ರನ್ ನ ಉಪಟಳ ಇಲ್ಲದ ಕಾರಣ, ಕಲೆಕ್ಷನ್ ಸಹಾ ಒಳ್ಳೆಯದಾಗಿ ಮೇಳಕ್ಕೆ ಆರ್ಥಿಕ ಬಲ ತಂದಿತು. ಮೂರನೇ ವರ್ಷದ ತಿರುಗಾಟದಲ್ಲಿ ಐರೋಡಿ ಗೋವಿಂದಪ್ಪ, ಹಳ್ಳಾಡಿಯವರು ಪುನಃ ಬಡಗು ತಿಟ್ಟಿಗೆ ಮರಳಿದರು. ಆಗ ತೆಂಕು ತಿಟ್ಟಿನ ಸುಪ್ರಸಿದ್ಧ ಕಲಾವಿದರಾದ ಕರವೊಳು ದೇರಣ್ಣ ಶೆಟ್ಟಿ, ಡಿ.ಮನೋಹರ್ ಕುಮಾರ್, ಉಜ್ರೆ ನಾರಾಯಣ, ಸುಪ್ರಸಿದ್ಧ ಸ್ತ್ರೀ ಪಾತ್ರಧಾರಿ ಕೊಕ್ಕಡ ಈಶ್ವರ ಭಟ್ ಮೇಳಕ್ಕೆ ಸೇರ್ಪಡೆಯಾದರು. ಈ ವರ್ಷದ ತಿರುಗಾಟದಲ್ಲಿಗುರುವಪ್ಪ ಬಾಯಾರು ವಿರಚಿತ "ಗಟ್ಟದ ಗರುಡೆ", "ಬಾಲೆದ ಬಲಿದಾನ" ಹಾಗೂ ಮೇಳದ ಯಜಮಾನರಾದ ದಾಸಪ್ಪ ರೈಯವರೇ ರಚಿಸಿದ "ಕಲ್ಜಿಗದ ಕಾಮಧೇನು" ತುಳು ಪ್ರಸಂಗಗಳು ಯಶಸ್ವಿಯಾಗಿ ಪ್ರದರ್ಶನ ಕಂಡಿತು. ಈ ವರ್ಷದ ತಿರುಗಾಟದಲ್ಲಿ ಮಂಗಳೂರಿನಲ್ಲಿ, ಅಪರೂಪ ಎನಿಸಿದ, ಕುಂಬ್ಳೆ ಮೇಳ ಹಾಗೂ ಪುತ್ತೂರು ಮೇಳದವರಿಂದ "ಜೋಡಾಟ" ದ ಪ್ರದರ್ಶನ ಯಶಸ್ವಿಯಾಗಿ ಪ್ರದರ್ಶನ ಕಂಡಿತು. ನಾಲ್ಕನೇ ವರ್ಷದ ತಿರುಗಾಟದಲ್ಲಿ ಬಾಬು ಕುಡ್ತಡ್ಕ, ಹರಿನಾರಾಯಣ ಬೈಪಡಿತ್ತಾಯ, ಶ್ರೀಮತಿ ಲೀಲಾವತಿ ಬೈಪಡಿತ್ತಾಯ, ಪೆರುವಾಯಿ ನಾರಾಯಣ ಶೆಟ್ಟಿಯವರು ಕುಂಬ್ಳೆ ಮೇಳಕ್ಕೆ ಸೇರ್ಪಡೆಯಾದರು. ಈ ಸಾಲಿನಲ್ಲಿ ಗುರುವಪ್ಪ ಬಾಯಾರು ವಿರಚಿತ "ಕಡಲ ಕೇಸರಿ" ಅನಂತರಾಮ ಬಂಗಾಡಿಯವರ "ಕಂಚಿದ ಕಂಕಣ" ಪೆರುವಾಯಿ ನಾರಾಯಣ ಶೆಟ್ಟರು ರಚಿಸಿದ "ಮುಗುರು ಮುತ್ತೈದೆ" ಪ್ರಸಂಗಗಳು ಯಶಸ್ವಿಯಾಗಿ ಪ್ರದರ್ಶನ ಕಂಡಿತು. ದಾಸಪ್ಪ ರೈಯವರ "ಕೋಟಿ" ಪಾತ್ರವು ಪ್ರಸಿದ್ಧಿಯಾಗಿರುವ ಕಾರಣ, ಈ ಎಲ್ಲಾ ತಿರುಗಾಟಗಳಲ್ಲೂ "ಕೋಟಿ ಚೆನ್ನಯ" ತುಳು ಪ್ರಸಂಗ ನೂರಾರು ಬಾರಿ ಪ್ರದರ್ಶನ ಕಂಡಿತು. ಈ ಸಾಲಿನಲ್ಲಿ ಕುಂಬ್ಳೆ ಮೇಳಕ್ಕೆ ಉತ್ತಮ ಕಲೆಕ್ಷನ್ ಆಗಿ ಆರ್ಥಿಕ ಚೇತರಿಕೆ ಕಂಡಿತು. ಐದನೇ ವರ್ಷದ ತಿರುಗಾಟದಲ್ಲಿ ಸುಪ್ರಸಿದ್ಧ ಕಲಾವಿದರಾದ ಮಲ್ಪೆ ರಾಮದಾಸ ಸಾಮಗ, ಸಿದ್ದಕಟ್ಟೆ ಚೆನ್ನಪ್ಪ ಶೆಟ್ಟಿ, ಭಾಗವತರಾದ ಕಡತೋಕ ಕೃಷ್ಣ ಭಾಗವತರು ಮುಂತಾದ ಕಲಾವಿದರ ಸೇರ್ಪಡೆಯಾಯಿತು. ಈ ವರ್ಷದ ತಿರುಗಾಟದಲ್ಲಿ ಹಿಂದಿನ ತುಳು ಪ್ರಸಂಗಗಳೊಂದಿಗೆ ಪೌರಾಣಿಕ ಪ್ರಸಂಗಗಳೂ ಹೆಚ್ಚಿನ ಸಂಖ್ಯೆಯಲ್ಲಿ ಪ್ರದರ್ಶನ ಕಂಡಿತು. ರಾಮದಾಸ ಸಾಮಗರು, ಅಮೃತ ಸೋಮೇಶ್ವರರಿಂದ ಈ ಸಾಲಿಗೆ "ಸತ್ಯ ಹರಿಶ್ಚಂದ್ರ" ಎಂಬ ಪ್ರಸಂಗ ಬರೆಸಿ, ಆ ಪ್ರಸಂಗ ಯಶಸ್ವಿಯಾಗಿ ಪ್ರದರ್ಶನ ಕಂಡಿತು. ಸಿದ್ದಕಟ್ಟೆ ಚೆನ್ನಪ್ಪ ಶೆಟ್ಟರು ಪೂರ್ವಾರ್ಧದಲ್ಲಿ ಹರಿಶ್ಚಂದ್ರನ ಪಾತ್ರ ನಿರ್ವಹಿಸಿದರೆ, ಸಾಮಗರು ಉತ್ತರಾರ್ಧದಲ್ಲಿ ಹರಿಶ್ಚಂದ್ರನ ಪಾತ್ರ ನಿರ್ವಹಿಸಿ, ಪ್ರೇಕ್ಷಕರ ಮನ ಗೆದ್ದರು. ಈ ಸಾಲಿನ ಪ್ರದರ್ಶನ ತೃಪ್ತಿಕರವಾಗಿದ್ದರೂ, ಕಲೆಕ್ಷನ್ ದೃಷ್ಟಿಯಿಂದ ಬಳಲಿತು .ದಾಸಪ್ಪ ರೈಯವರು ಸಾಲ ಮಾಡಿಯೇ ಮೇಳವನ್ನು ಮುನ್ನಡೆಸಬೇಕಾದ ಕಾರಣ, ಆರ್ಥಿಕವಾಗಿ ತುಂಬಾ ಬಳಲಿದರು. ಕುಂಬ್ಳೆ ಮೇಳದ ಆರನೆಯ ತಿರುಗಾಟ 1990ರಲ್ಲಿ, ಕೊನೆಯ ತಿರುಗಾಟವಾಯಿತು. ಆರನೇ ತಿರುಗಾಟದಲ್ಲಿ ಅರುವ ನಾರಾಯಣ ಶೆಟ್ಟಿ, ಶಾಮಸುಂದರ್, ಸರಪಾಡಿ ಅಶೋಕ ಶೆಟ್ಟರು ಕುಂಬ್ಳೆ ಮೇಳ ಸೇರಿದರು. ಈ ತಿರುಗಾಟದಲ್ಲಿ ಹಿಂದಿನ ತಿರುಗಾಟದ ಪ್ರಸಂಗದೊಂದಿಗೆ ತಾರನಾಥ ವರ್ಕಾಡಿಯವರು ರಚಿಸಿದ "ಬ್ರಹ್ಮ ಬೈದೇರ್" ಪ್ರಸಂಗವೂ ಪ್ರದರ್ಶನ ಕಂಡಿತ್ತು. ಆದರೆ, ಈ ತಿರುಗಾಟವು ದಾಸಪ್ಪ ರೈಯವರಿಗೆ ಚೇತರಿಸಲು ಆಗದಷ್ಟು ತೀವ್ರ ಆರ್ಥಿಕ ಹೊಡೆತ ನೀಡಿತು. ಆದ ಕಾರಣ, ಮೇಳ ಮುನ್ನಡೆಸಲು ಆಗದೇ, ತಿರುಗಾಟದ ಮಧ್ಯದಲ್ಲೇ ಶೇಣಿ ಎಂಬಲ್ಲಿ ಕೊನೆಯ ಪ್ರದರ್ಶನ ನೀಡಿ, ನಂತರ ಕುಂಬ್ಳೆ ಗೋಪಾಲಕೃಷ್ಣ ದೇವರ ಸನ್ನಿಧಿಯಲ್ಲಿ ಕೊನೆಯ ಸೇವೆಯಾಟ ಆಡಿಸಿದರು. ಈ ಎಲ್ಲಾ ತಿರುಗಾಟದ ಸಂದರ್ಭದಲ್ಲಿ ಮಾಚಡ್ಕ ಪುರುಷೋತ್ತಮ ರಾವ್ ಎಂಬ ಮಹನೀಯರು ರೈಯವರಿಗೆ ತುಂಬಾ ಪ್ರೋತ್ಸಾಹ ನೀಡಿದ್ದರು.

ಉತ್ತಮ ಕಲಾವಿದರು, ಸಂಘಟಕರು, ಸಜ್ಜನಿಕೆಯ ವ್ಯಕ್ತಿತ್ವದ ದಾಸಪ್ಪ ರೈಯವರು, ಯಕ್ಷಗಾನಕ್ಕೆ ಒಂದು ಒಳ್ಳೆಯ ಮೇಳ ಒದಗಿಸುವ ಸದುದ್ದೇಶದೊಂದಿಗೆ ಕುಂಬ್ಳೆ ಮೇಳ ಹೊರಡಿಸಿದ್ದರು. ಆದರೆ, ಇದು ದಾಸಪ್ಪ ರೈಯವರಿಗೆ ಆರ್ಥಿಕವಾಗಿ ದೊಡ್ಡ ಹೊಡೆತ ನೀಡಿದ್ದು, ವಿಧಿಯ ಕ್ರೂರ ವಿಲಾಸ ಎನ್ನಬಹುದೇನೋ? ಮೇಳದಲ್ಲಿ ೬೫ ಮಂದಿಗೆ ಜೀವನೋಪಾಯ ಒದಗಿಸಿದ ದಾಸಪ್ಪ ರೈಯವರು, ಇದೀಗ ಯಕ್ಷರಂಗದಿಂದ ನಿವೃತ್ತರಾಗಿ ಪುತ್ತೂರಿನಲ್ಲಿ ನೆಲೆಸಿದ್ದಾರೆ. ಯಕ್ಷಗಾನದ ಕುರಿತಾದ ಎಲ್ಲಾ ಮಾಹಿತಿಗಳ ಸಂಪನ್ಮೂಲ ವ್ಯಕ್ತಿಯಾಗಿರುವ, ಯಕ್ಷಗಾನದ ಅಪೂರ್ವ ಅನುಭವ, ಮಾಹಿತಿ ಹೊಂದಿರುವ ರೈಯವರು ಯಕ್ಷಗಾನದ ಸಭೆ – ಕಮ್ಮಟಗಳಲ್ಲಿ ಭಾಗವಹಿಸಿ ವಿಶ್ರಾಂತ ಜೀವನ ನಡೆಸುತ್ತಿದ್ದಾರೆ. ನನ್ನ ಅತ್ಯಂತ ಆತ್ಮೀಯ ಮಿತ್ರರಾದ ಹಾಗೂ ಅವರ ಅಭಿಮಾನಿಯೂ ಆಗಿರುವ ನಾನು ದಾಸಪ್ಪ ರೈಯವರಿಗೆ ಶುಭವಾಗಲಿ ಎಂದು ಹಾರೈಸುತ್ತೇನೆ.

***ಲೇಖಕರು– ಎಂ.ಶಾಂತರಾಮ ಕುಡ್ವ, ಮೂಡುಬಿದಿರೆ***

# ಮಂದಾರ್ತಿ ಮೇಳದ ಹಿರಿಯ ಸ್ತ್ರೀ ವೇಷಧಾರಿ – ದಿವಾಕರ ಆವರ್ಸೆ

ಸುಂದರವಾದ ರೂಪ, ಆಳಂಗ, ಹಾರಾಡಿ ಕಲಾವಿದರ ಮಯ್ಯರೇಖೆ, ಸ್ತ್ರೀ ವೇಷಕ್ಕೊಪ್ಪುವ ಸ್ವರಭಾರ, ಒನಪು ವಯ್ಯಾರಗಳಿಂದ ನಿರಂತರ ೩೨ ವರ್ಷ ಸ್ತ್ರೀ ವೇಷಧಾರಿಯಾಗಿ ಜನಮನ ಗೆದ್ದ ದಿವಾಕರ ಪೂಜಾರಿಯವರು ೪ ವರ್ಷ ರಾಮ ನಾಯರಿಯವರ ಒಡನಾಟದಿಂದ ಚುರುಕಿನ ನೃತ್ಯ, ಮಾತುಗಾರಿಕೆಯನ್ನು ರಾಮ ನಾಯರಿಯವರಿಂದ ಬಳುವಳಿಯಾಗಿ ಪಡೆದವರು.



ಉಡುಪಿ ತಾಲೂಕು ಆವರ್ಸೆಯಲ್ಲಿ ಕೃಷ್ಣ ಪೂಜಾರಿ ಮತ್ತು ಪದ್ದು ದಂಪತಿಗಳ ಪುತ್ರನಾಗಿ ೧೯೭೪ರಲ್ಲಿ ಜನಿಸಿದ ಇವರು ಆವರ್ಸೆ ಶಾಲೆಯಲ್ಲಿ ೭ನೇ ತರಗತಿಗೆ ಶರಣು ಹೊಡೆದು ಬಡಗುತಿಟ್ಟಿನ ಪ್ರಸಿದ್ದ ಕಲಾವಿದ ವಂಡಾರು ಬಸವ ನಾಯರಿಯವರ ಹೂವಿನಕೋಲು ಕಲಾವಿದರಾಗಿ ಯಕ್ಷಗಾನ ರಂಗಕ್ಕೆ ಸೇರ್ಪಡೆಗೊಂಡರು. ಪ್ರಸಿದ್ದ ಹಾಸ್ಯಗಾರ ಮತ್ತು ನೃತ್ಯಗುರು ಆವರ್ಸೆ ಚಂದ್ರ ಕುಲಾಲರನ್ನು ಗುರುವಾಗಿ ಸ್ವೀಕರಿಸಿ ಹೆಜ್ಜೆಗಾರಿಕೆಯನ್ನೂ, ವಂಡಾರು ಬಸವ ನಾಯರಿಯವರಿಂದ ಅರ್ಥಗಾರಿಕೆಯನ್ನೂ ಕಲಿತ ಅವರು ಶ್ರೀ ಅಮೃತೇಶ್ವರಿ ಮೇಳದಲ್ಲಿ ಪ್ರಥಮವಾಗಿ ಗೆಜ್ಜೆ ಕಟ್ಟಿದರು. ಬಳಿಕ ಕೆಲವು ವರ್ಷಗಳ ನಂತರ ಅದೇ ಮೇಳದ ಪ್ರಧಾನ ಸ್ತ್ರೀವೇಷಧಾರಿಯಾಗಿ ಮೂಡಿ ಬಂದದ್ದು ಅವರ ಸಾಧನೆಯೇ ಸರಿ. ಸಾಲಿಗ್ರಾಮ ಮೇಳದಲ್ಲಿ ಗುಂಡ್ಮಿ ಕಾಳಿಂಗ ನಾವಡರ ಭಾಗವತಿಕೆಗೆ ಹೆಜ್ಜೆ ಹಾಕಿದ್ದು ಅವರ ಹೆಚ್ಚುಗಾರಿಕೆ. ಅಲ್ಲಿ ಅರಾಟೆ ಮಂಜುನಾಥ, ದಯಾನಂದ ನಾಗೂರ್, ಹೊಸಂಗಡಿ ರಾಜೀವ ಶೆಟ್ಟಿ, ರಾಮ ನಾಯರಿ ಮುಂತಾದ ಸ್ತ್ರೀ ವೇಷಧಾರಿಗಳು, ಜಲವಳ್ಳಿ ವೆಂಕಟೇಶ ರಾವ್, ಐರೋಡಿ ಗೋವಿಂದಪ್ಪ, ಬಳ್ಕೂರು ಕೃಷ್ಣ ಯಾಜಿ ಮುಂತಾದವರ ಒಡನಾಟದಿಂದ ಉತ್ತಮ ಸ್ತ್ರೀವೇಷಧಾರಿಯಾಗಿ ಮೂಡಿಬಂದರು. ಅಲ್ಲಿ ಪ್ರದರ್ಶನಗೊಳ್ಳುತ್ತಿದ್ದ ಹೊಸ ಪ್ರಸಂಗಗಳಲ್ಲಿ ಅವರ ಸಣ್ಣಪುಟ್ಟ ಪಾತ್ರಗಳು ಅಪಾರ ಜನಮನ್ನಣೆ ಪಡೆದವು. ಬಳಿಕ ಪೆರ್ಡೂರು, ಗೋಳಿಗರಡಿ, ಕಳುವಾಡಿ, ಬಚ್ಚಗಾರು



ಮೇಳಗಳಲ್ಲಿ ಸೇವೆ ಸಲ್ಲಿಸಿದ ಇವರು ಸದ್ಯ ಶ್ರೀ ಮಂದಾರ್ತಿ ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಸುಂದರವಾದ ರೂಪ ಇವರ ದೈವೀದತ್ತ ಕೊಡುಗೆ. ಹಾಗಾಗಿ ಶೃಂಗಾರ ಪ್ರಧಾನವಾದ ಮಾಯಾ ಹಿಡಿಂಬೆ, ಮಾಯಾ ಶೂರ್ಪನಿಕೆ, ಶ್ವೇತಕುಮಾರ ಚರಿತ್ರೆಯ ತ್ರಿಲೋಕ ಸುಂದರಿ, ರಂಭೆ, ಅಜಮುಖಿ, ಚಿತ್ರಾಕ್ಷಿ,ಭೀಷ್ಮೋತ್ಪತ್ತಿಯ ಸತ್ಯವತಿ, ಭ್ರಮರಕುಂತಳೆ ಮುಂತಾದ ಶೃಂಗಾರ ಪ್ರಧಾನ ವೇಷಗಳು ಅಪಾರ ಜನಮೆಚ್ಚುಗೆ ಪಡೆದಿದ್ದು ಇವುಗಳೆಲ್ಲಾ ರಾಮ ನಾಯರಿಯವರ ವೇಷದ ಪಡಿಯಚ್ಚಿನಂತೆ ಗೋಚರಿಸುತ್ತವೆ. ಮುಖ್ಯ ಸ್ತ್ರೀ ವೇಷಧಾರಿಯಾಗಿ ಶಶಿಪ್ರಭೆ, ದ್ರೌಪದಿ, ದಮಯಂತಿ, ಸೀತೆ, ಸೈರಂದ್ರಿ, ಮಂಡೋದರಿ ರುಚಿಮತಿ, ಮುಂತಾದ ಪಾತ್ರಗಳಿಗೂ ಸಮಾನ ನ್ಯಾಯ ಒದಗಿಸಿದ್ದಾರೆ. ಜೋಡಾಟದ ಹುಲಿಯೆಂದೇ ಗುರುತಿಸಲ್ಪಟ್ಟ ಇವರ ಜೋಡಾಟದ ಕಸೆವೇಷಗಳಾದ ಮೀನಾಕ್ಷಿ, ಪದ್ಮಗಂಧಿ, ದ್ರೌಪದಿ, ಸುಭದ್ರೆ, ಸತ್ಯಭಾಮೆ, ಮದನಾಕ್ಷಿ, ತಾರಾವಳಿ ಮುಂತಾದ ಪಾತ್ರಗಳು ಎದುರು ಮೇಳದ ಸ್ತ್ರೀ ವೇಷಧಾರಿಗಳಿಗೆ ಸಮಾನ ಸ್ಪರ್ಧೆಯನ್ನು ಒಡ್ಡುತ್ತಿದ್ದವು. ಸೌಕೂರು ಮತ್ತು ಅಮೃತೇಶ್ವರಿ ಮೇಳಗಳಿಗೆ ಆಗಾಗ ನಡೆಯುತ್ತಿದ್ದ ಜೋಡಾಟಗಳಲ್ಲಿ ಸೌಕೂರು ಮೇಳದ ಸ್ತ್ರೀ ವೇಷಧಾರಿ ಕುಂಜಾಲು ವಿಷ್ಣುಮೂರ್ತಿ ಬಾಸ್ರಿಯವರ ಕಸೆ ವೇಷಗಳಿಗೆ ಅಮೃತೇಶ್ವರಿ ಮೇಳದ ಇವರ ಪಾತ್ರಗಳು ಸಮರ್ಥ ಸ್ಪರ್ದೆ ನೀಡುತ್ತಿದ್ದವು. ಪ್ರತಿನಿತ್ಯವೂ ಪೌರಾಣಿಕ ಪ್ರಸಂಗಗಳನ್ನು ಮಾತ್ರ ಪ್ರದರ್ಶಿಸುತ್ತಿರುವ ಮಂದಾರ್ತಿ ಮೇಳದಲ್ಲಿ ಅವರ ಪೌರಾಣಿಕ ಪಕ್ವತೆ ಇನ್ನಷ್ಟು ಪಳಗಿದೆ. ಮಳೆಗಾಲದಲ್ಲಿ ಕುಂಜಾಲು ಯಕ್ಷಸಮೂಹ ಪ್ರತಿಷ್ಠಾನದ ಮೂಲಕ ಅವರ ಕಲಾಸೇವೆ ನಿರಂತರವಾಗಿ ಮುಂದುವರಿಯುತ್ತಿದೆ. ಬಡಗುತಿಟ್ಟಿನ ರಂಗಸ್ಥಳದಲ್ಲಿ ಹುರುಪು ಹುಮ್ಮಸ್ಸಿನಿಂದ ಯಕ್ಷಗಾನದ ಹೆಣ್ತನವನ್ನು ಸಾಕಾರಗೊಳಿಸುತ್ತಾ ಶ್ರೀ ಮಂದಾರ್ತಿ ಅಮ್ಮನ ಕಲಾಸೇವೆಯನ್ನು ನಿಷ್ಠೆಯಿಂದ ನಡೆಸುತ್ತಿರುವ ದಿವಾಕರ ಆವರ್ಸೆಯವರು ಪತ್ನಿ ಜ್ಯೋತಿ ಮೂವರು ಮಕ್ಕಳೊಂದಿಗೆ ಆವರ್ಸೆಯಲ್ಲಿ ವಾಸಿಸುತ್ತಿದ್ದಾರೆ. ಬ್ರಹ್ಮಾವರ ರಾಮ ನಾಯರಿಯವರನ್ನು ಮಾನಸಿಕ ಗುರುವಾಗಿ ಸ್ವೀಕರಿಸಿ ಅವರ ಅನುಕರಣೆ ಅನುಸರಣೆಯಲ್ಲಿ ಅಭಿನವ ನಾಯರಿ ಎಂದು ಗುರುತಿಸ್ಪಡುವ ದಿವಾಕರ ಆವರ್ಸೆಯವರಿಗೆ ನಾಯರಿ ಸಂಸ್ಮರಣಾ ಪ್ರಶಸ್ತಿ ಯೋಗ್ಯವಾಗಿಯೇ ಸಲ್ಲುತ್ತಿದೆ.



***ಲೇಖಕರು – ಪ್ರೋ.ಎಸ್.ವಿ. ಉದಯ ಕುಮಾರ ಶೆಟ್ಟಿ ಮಣಿಪಾಲ***

---

# "ರಂಗದ ರಾಜ" ಪೆರುವಾಯಿ ನಾರಾಯಣ ಶೆಟ್ಟಿ ಅಸ್ತಂಗತ

ಇತ್ತೀಚಿಗೆ ನಿಧನರಾದ ಪೆರುವಾಯಿ ನಾರಾಯಣ ಶೆಟ್ಟರು ಯಕ್ಷರಂಗದಲ್ಲಿ ಸಂಚಲನ ಮೂಡಿಸಿದ ಹೆಸರು. ಪರಂಪರೆ ಯಕ್ಷಗಾನದ ಬೆರಳೆಣಿಕೆಯ ಕೊನೆಯ ಕೊಂಡಿಗಳಲ್ಲಿ ಓರ್ವರು ಎಂದೇ ಗುರುತಿಸಬಹುದಾದ ಕಲಾವಿದರು. ಇತ್ತೀಚಿಗೆ ನಿಧನರಾದ ಯಕ್ಷಗಾನದ ಶ್ರೇಷ್ಠ ಸಾಧಕರರಾದ ಬಲಿಪ ನಾರಾಯಣ ಭಾಗವತರು ಎರಡು ವರ್ಷಗಳ ಹಿಂದೆ ನನ್ನಲ್ಲಿ ಹೇಳಿದಂತೆ ಯಕ್ಷಗಾನದ ಎಲ್ಲಾ ಪಾತ್ರಗಳ ನಾಟ್ಯ, ನಡೆಯನ್ನು ಅರಿತಿರುವ ಈಗ ಇರುವವರಲ್ಲಿ ಇಬ್ಬರು ಕಲಾವಿದರಲ್ಲಿ ಓರ್ವರು ಶ್ರೀ. ಕೆ. ಗೋವಿಂದ ಭಟ್ ರಾದರೆ, ಇನ್ನೋರ್ವರು ಪೆರುವಾಯಿ ನಾರಾಯಣ ಶೆಟ್ಟರು. "ರಂಗದ ರಾಜ" ಎಂಬ ಅನ್ವರ್ಥಕ ನಾಮಕ್ಕೆ ಮೆರುಗು ತಂದ ಪೆರುವಾಯಿ ನಾರಾಯಣ ಶೆಟ್ಟರು ಮಹಾನ್ ಕಲಾವಿದರು.

1942ರಲ್ಲಿ ಬಂಟ್ವಾಳ ತಾಲೂಕಿನ ಪೆರುವಾಯಿ ಎಂಬ ಊರಿನಲ್ಲಿ ಮದನಪ್ಪ ಶೆಟ್ಟಿ– ಅಬ್ಬಕ್ಕ ದಂಪತಿಯ ಸುಪುತ್ರರಾಗಿ ಜನಿಸಿದ ಪೆರುವಾಯಿ ನಾರಾಯಣ ಶೆಟ್ಟರು ಬಾಲ್ಯದಲ್ಲಿಯೇ ಯಕ್ಷಗಾನ ಪ್ರದರ್ಶನ ನೋಡಿ ಯಕ್ಷಗಾನದ ಗೀಳು ಅಂಟಿಸಿಕೊಂಡರು. 6ನೇ ತರಗತಿಯ ವ್ಯಾಸಂಗ ಪೂರೈಸಿ ಅಂದಿನ ಸುಪ್ರಸಿದ್ಧ ಯಕ್ಷಗಾನ ಕಲಾವಿದರು ಹಾಗೂ ಗುರುಗಳಾದ ದಿ. ಪೈವಳಿಕೆ ಐತಪ್ಪ ಶೆಟ್ಟರಲ್ಲಿ ಯಕ್ಷಗಾನದ ಪ್ರಾಥಮಿಕ ಹೆಜ್ಜೆಯನ್ನು ಕಲಿತು, ತಮ್ಮ 12ನೇ ವಯಸ್ಸಿನಲ್ಲಿಯೇ ಯಕ್ಷರಂಗ ಪ್ರವೇಶಿಸಿದರು. ದಿ. ಅಡ್ಕಸ್ಥಳ ನಾರಾಯಣ ಶೆಟ್ಟಿ ಹಾಗೂ ಕುಡಾಣ ಗೋಪಾಲಕೃಷ್ಣ ಭಟ್ಟರಲ್ಲಿ ಶಿಷ್ಯರಾಗಿ ಸೇರಿ ಯಕ್ಷಗಾನದ ವಿಶಿಷ್ಠ ನಾಟ್ಯಾಭ್ಯಾಸ, ಆಂಗಿಕ ಅಭಿನಯ ಹಾಗೂ ರಂಗತಂತ್ರಗಳನ್ನು ಕರಗತಗೊಳಿಸಿದರು. ಹೀಗೆ ಅಂದಿನ ಕಾಲದ ತ್ರಿಮೂರ್ತಿಗಳು ಎನಿಸಿದ ಯಕ್ಷಗಾನದ ಶ್ರೇಷ್ಠ ಗುರುಗಳಿಂದ ಯಕ್ಷಗಾನದ ಸಂಪೂರ್ಣ ಪಟ್ಟುಗಳನ್ನು ಕಲಿತ ಶಿಷ್ಯ ಎನಿಸಿಕೊಂಡರು. ಮುಂದೆ ಧರ್ಮಸ್ಥಳ ಮೇಳಕ್ಕೆ ಸೇರ್ಪಡೆಯಾದಾಗ, ಯಕ್ಷಗಾನದ ದಂತಕಥೆ ಎನಿಸಿದ ಕುರಿಯ ವಿಠಲ ಶಾಸ್ತ್ರಿಗಳಲ್ಲೂ ಯಕ್ಷಗಾನದ ಹೆಚ್ಚಿನ ರಂಗ ಮಾಹಿತಿ, ಹೆಜ್ಜೆಗಾರಿಕೆಯ ಪಾಠ ಗಳಿಸಿಕೊಂಡರು. ಅಂದಿನ ಕಾಲದ ಸುಪ್ರಸಿದ್ಧ ಭರತನಾಟ್ಯ ಗುರುಗಳಾದ ಕುದ್ಕಾಡಿ ವಿಶ್ವನಾಥ ರೈಯವರಲ್ಲಿ ಭರತನಾಟ್ಯವನ್ನೂ ಕಲಿತರು. ಹೀಗೆ ಪೆರುವಾಯಿಯವರ ವೃತ್ತಿಜೀವನಕ್ಕೆ ಪಂಚ ಗುರುಗಳ ಕಾಣಿಕೆ ಸಂದಿದೆ. ಮುಂದೆ ಕಲ್ಲಾಡಿ ವಿಠಲ ಶೆಟ್ಟರು ಪ್ರಾರಂಭಿಸಿದ ತೆಂಕು–ಬಡಗು ತಿಟ್ಟಿನ "ಕಲಾವಿಹಾರ" ಮೇಳದಲ್ಲಿ ಕಲಾವಿದರಾಗಿ ಸೇರ್ಪಡೆಯಾದಾಗ, ಅಲ್ಲಿ ಬಡಗು ತಿಟ್ಟಿನ ಶ್ರೇಷ್ಠ ಗುರುಗಳಾದ ವೀರಭದ್ರ ನಾಯಕ್, ಮಹಾಬಲ ಗಾಣಿಗ, ಅರಾಟೆ ಮಂಜುನಾಥ ಮುಂತಾದ ಕಲಾವಿದರ ಸಂಪರ್ಕದಿಂದ ಇನ್ನಷ್ಟು ರಂಗ ಮಾಹಿತಿಗಳನ್ನು ಪಡೆದರು. ಕೊಕ್ಕಡ ಈಶ್ವರ ಭಟ್ಟರೂ ಇವರಿಗೆ ಯಕ್ಷಗಾನದ ಮಾಹಿತಿ ನೀಡಿದ್ದರು. ಶೆಟ್ಟರು ಸುಪ್ರಸಿದ್ಧ ಯಕ್ಷಗಾನ ಕಲಾವಿದರಾದ ದಿ.ಕರುವೊಳು ದೇರಣ್ಣ ಶೆಟ್ಟರ ಪ್ರೇರಣೆಯೊಂದಿಗೆ ಅವರಿಂದಲೇ ಗೆಜ್ಜೆ ಪಡೆದು ತಮ್ಮ ಪ್ರಾರಂಭಿಕ ತಿರುಗಾಟವನ್ನು ಕುಂಡಾವು ಮೇಳದಲ್ಲಿ ನಡೆಸಿದರು. ನಾಲ್ಕು ವರ್ಷದ ತಿರುಗಾಟದ ನಂತರ ಏನೋ ಸಮಸ್ಯೆಯಿಂದಾಗಿ ಮೂರು ವರ್ಷಗಳ ಕಾಲ ತಿರುಗಾಟಕ್ಕೆ ಹೋಗಲಿಲ್ಲ. ನಂತರ ಮಡಿಕೇರಿಯ ಚೌಡೇಶ್ವರಿ ಮೇಳ ಸೇರಿದರು. ನಂತರದಲ್ಲಿ ಕಲಾವಿಹಾರ ಮೇಳದಲ್ಲಿ ತಿರುಗಾಟ ನಡೆಸಿ, ವಿಠಲ ಶೆಟ್ಟರ ಆಶಯದಂತೆ ಕಟೀಲು ಮೇಳ ಸೇರಿದರು. ಆಗ ಕಟೀಲು ಮೇಳವು ಒಂದೇ ಇದ್ದ ಕಾಲ. ಕಟೀಲು ಮೇಳವು ಶೆಟ್ಟರ ಪ್ರತಿಭಾ ಪ್ರದರ್ಶನಕ್ಕೆ ಯೋಗ್ಯ ವೇದಿಕೆಯಾಯಿತು. ಉತ್ತಮ ಪೌರಾಣಿಕ ಜ್ಞಾನ, ರಾಮಾಯಣ, ಮಹಾಭಾರತ ಅಭ್ಯಸಿಸಿದ್ದ ಶೆಟ್ಟರು ಕಟೀಲು ಮೇಳದಲ್ಲಿ ನಾಟ್ಯದೊಂದಿಗೆಯೇ ಅರ್ಥಗಾರಿಕೆಯಲ್ಲೂ ಪ್ರಭುತ್ವ ಸಾಧಿಸಿದರು. ಕಟೀಲು ಮೇಳದಲ್ಲಿರುವಾಗ ಪೆರುವಾಯಿ×ಪದ್ರೆಚಂದು, ಪೆರುವಾಯಿ×ಗುಡ್ಡಪ್ಪ ಗೌಡ, ಪೆರುವಾಯಿ×ಕುಷ್ಟ ಗಾಣಿಗ, ಪೆರುವಾಯಿ×ಸಿದ್ದಕಟ್ಟೆ ಚೆನ್ನಪ್ಪ ಶೆಟ್ಟಿ, ಪೆರುವಾಯಿ×ಅರುವ ನಾರಾಯಣ ಜೋಡಿ ಅತ್ಯಂತ ಪ್ರಸಿದ್ಧಿ ಗಳಿಸಿತ್ತು. ನಾನು ಬಾಲ್ಯದಲ್ಲಿ ಪೆರುವಾಯಿಯವರ ಪಾತ್ರ. ನೋಡಿಯೇ ಬೆಳೆದವನು. ಒಂದರ್ಥದಲ್ಲಿ ನನಗೆ ಯಕ್ಷಗಾನದ ಗೀಳು ಹುಟ್ಟುವಲ್ಲಿ ಪೆರುವಾಯಿಯವರ ಪಾತ್ರವೇ ಕಾರಣವಾಗಿತ್ತು ಎಂಬುದು ಸತ್ಯದ ಮಾತು. (ಇದನ್ನು ನಾನು ಪೆರುವಾಯಿಯವರಲ್ಲಿ ಹಲವಾರು ಬಾರಿ ಹೇಳಿಯೂ ಇದ್ದೆ) ಕಟೀಲು ಕ್ಷೇತ್ರ ಮಹಾತ್ಮೆ ಪ್ರಸಂಗದ ಜಾಬಾಲಿಯ ಪಾತ್ರವು ಶೆಟ್ಟರಿಗೆ ಅಪಾರ ಪ್ರಸಿದ್ಧಿ ತಂದಿತ್ತು. ಕುಷ್ಟ ಗಾಣಿಗರ ನಂದಿನಿ ಹಾಗೂ ಶೆಟ್ಟರ ಜಾಬಾಲಿ ಪಾತ್ರದ ವಾದಸರಣಿ ಪ್ರೇಕ್ಷಕರನ್ನು ಪೌರಾಣಿಕ ಲೋಕಕ್ಕೆ ಕೊಂಡೊಯುವಲ್ಲಿ ಯಶಸ್ವಿಯಾಗಿತ್ತ. ನಂದಿನಿಯೊಂದಿಗೆ ತಗ್ಗಿಬಗ್ಗಿ ಮಾತಾಡುವಲ್ಲಿಯ ವಿನಯತೆ, ದೇವಲೋಕದಲ್ಲೂ ಅನ್ಯಾಯವಾಗಿದೆ ಎಂದು ಸಮರ್ಥವಾಗಿ ವಾದದ ಮೂಲಕ ಬಿಂಬಿಸುವ ಪಾತ್ರ ಚಿತ್ರಣ ಎಲ್ಲವೂ ಶೆಟ್ಟರಲ್ಲಿ ಆವಿರ್ಭವಿಸಿದ ಕಾರಣ, ಇಂದಿಗೂ "ಜಾಬಾಲಿ" ಎಂದಾಗ ಪೆರುವಾಯಿಯವರ ನೆನಪು

ಬಾರದಿರದು. "ನನ್ನ ಅಚ್ಚುಮೆಚ್ಚಿನ ಪಾತ್ರವೂ ಜಾಬಾಲಿಯೇ" ಎಂದು ಶೆಟ್ಟರು ನನ್ನಲ್ಲಿ ಯಾವಾಗಲೂ ಹೇಳುತ್ತಿದ್ದರು. ಐದು ವರ್ಷಗಳ ಹಿಂದೆ "ಕಟೀಲು ಕ್ಷೇತ್ರ ಮಹಾತ್ಮೆ" ಪ್ರಸಂಗ ರಚಿಸಿದ "ಅಭಿನವ ನಾಗವರ್ಮ" ಎನಿಸಿದ ಡಾ.ಶಿಮಂತೂರು ನಾರಾಯಣ ಶೆಟ್ಟಿ ಹಾಗೂ ಅವರ ಪಟ್ಟಶಿಷ್ಯ ಗಣೇಶ್ ಕೊಲೆಕಾಡಿಯವರಿಗೆ ಮಾಜಿ ಸಚಿವರಾದ, ಮೂಡುಬಿದಿರೆಯ ಶ್ರೀ ಅಭಯಚಂದ್ರರು ಸಂಮಾನ ಮಾಡುವ ಸಂದರ್ಭದಲ್ಲಿ, ಪಾತ್ರ ನಿರ್ವಹಿಸಲು ಬಂದಿದ್ದ ಪೆರುವಾಯಿ ನಾರಾಯಣ ಶೆಟ್ಟಿ ಹಾಗೂ ನಾನು ಮುಖಾಮುಖಿಯಾದಾಗ ಶಿಮಂತೂರರು, ನನ್ನಲ್ಲಿ ಪೆರುವಾಯಿಯವರ ಜಾಬಾಲಿ ಪಾತ್ರದ ಚಿತ್ರಣವನ್ನು ಹೊಗಳಿ, "ನನ್ನ ಕಲ್ಪನೆಯಂತೆಯೇ ಜಾಬಾಲಿ ಪಾತ್ರವನ್ನು ಚಿತ್ರಣ ಮಾಡಿದ್ದೀರಿ" ಎಂದು ಶ್ಲಾಘಿಸಿದ್ದರು. (ಪ್ರಥಮವಾಗಿ, ಕಿನ್ನಿಗೋಳಿಯಲ್ಲಿ ಜಾಬಾಲಿ ಪಾತ್ರ ನಿರ್ವಹಿಸಿ, ಜಾಬಾಲಿ ಪಾತ್ರಕ್ಕೆ ಮೂಲ ಚಿತ್ರಣ ನೀಡಿದವರು ಡಾ. ಶಿಮಂತೂರು ನಾರಾಯಣ ಶೆಟ್ಟರೇ ಆಗಿದ್ದರು ಎಂಬುದು ಉಲ್ಲೇಖನೀಯ) ಪೆರುವಾಯಿಯವರಿಗೆ ದೈವದತ್ತವಾಗಿ ಬಂದಿದ್ದ ಕಂಚಿನ ಕಂಠ, ನಾಟ್ಯದ ಸೊಬಗು, ಶ್ರುತಿಬದ್ಧವಾದ ನಿರರ್ಗಳವಾದ ವಾಗ್ಸರಣಿ, ರಂಗದ ನಡೆ ಎಲ್ಲವೂ ಪ್ರೇಕ್ಷಕರನ್ನು ಆಕರ್ಷಿಸಲು ಕಾರಣವಾಯಿತು. ನಂತರದಲ್ಲಿ ಸ್ವಲ್ಪ ಕಾಲ ಧರ್ಮಸ್ಥಳ, ಪುತ್ತೂರು ಮೇಳ, ಕದ್ರಿ, ಬಪ್ಪನಾಡು, ಕರ್ನಾಟಕ, ಕುಂಬಳೆ, ಕುಂಟಾರು ಮೇಳಗಳಲ್ಲಿ ತಿರುಗಾಟ ನಡೆಸಿ, ಪುನಃ ಕಟೀಲು ಮೇಳ ಸೇರಿ, ಕಟೀಲು ಮೇಳದಲ್ಲೇ 35 ವರ್ಷಗಳ ಸೇವೆ ಸಲ್ಲಿಸಿ, ಯಕ್ಷರಂಗದಿಂದ ನಿವೃತ್ತರಾದರು.



ಶೆಟ್ಟರ ಎಲ್ಲಾ ಪಾತ್ರಗಳೂ ಪರಿಪೂರ್ಣ ಜಾಬಾಲಿ, ಅರುಣಾಸುರ, ರಕ್ತಬೀಜ, ಋತುಪರ್ಣ, ಕಂಸ, ತಾಮ್ರಧ್ವಜ, ಅರ್ಜುನ, ಕರ್ಣ, ಗದಾಯುದ್ಧದ ಕೌರವ, ಭೀಷ್ಮ, ಜಲಂಧರ, ಅತಿಕಾಯ, ಇಂದ್ರಜಿತು, ಸುಂದರ ರಾವಣ, ಹಿರಣ್ಯಕಶಿಪು, ಶಿಶುಪಾಲ ಮುಂತಾದ ಪಾತ್ರಗಳು ಶೆಟ್ಟರಿಗೆ ಅಪಾರ ಪ್ರಸಿದ್ಧಿ ತಂದಿವೆ. ಪಾತ್ರದಲ್ಲಿ ಪರಕಾಯ ಪ್ರವೇಶ ಮಾಡುವಲ್ಲಿ ಶೆಟ್ಟರು ಸಿದ್ಧಹಸ್ತರು. ಕರ್ಣನಾಗಿ, "ಶಿವಶಿವ ಸಮರದೊಳು ಕೈ ಸೋತೆನಲ್ಲ ಪದ್ಯಕ್ಕೆ ಅರ್ಥ ಹೇಳಿ ಅಭಿನಯಿಸುವಾಗ ಸಭೆಯಿಡೀ ಕಣ್ಣೀರು ಹಾಕುವಂತಹ ಭಾವಾಭಿನಯ ಶೆಟ್ಟರದು. ಅತಿಕಾಯನಾಗಿ ರಾಮಭಕ್ತಿಯನ್ನು ಬಿಂಬಿಸಿದಂತೆ, ಇಂದ್ರಜಿತುವಾಗಿ ರಾಮದ್ವೇಷವನ್ನೂ ಅಷ್ಟೇ ಸಮರ್ಥವಾಗಿ ಕಟೆದು ನಿಲ್ಲಿಸುತ್ತಿದ್ದರು. ಋತುಪರ್ಣನಾಗಿ, ಬಾಹುಕನೇ ನಳ ಎಂದು ತಿಳಿದಾಗ, ತಾನು ಪಾಪ ಮಾಡಿದೆ ಎಂಬ ಪಶ್ಚಾತ್ತಾಪವನ್ನು ಚೆನ್ನಾಗಿ ಬಿಂಬಿಸುವ ಪಾತ್ರ ಕೌಶಲ್ಯತೆ ಶೆಟ್ಟರದು. ಜಲಂಧರನಾಗಿ ವಿಷ್ಣುವಿನಲ್ಲಿ ತೋರುವ ಭಕ್ತಿ, ವೃಂದೆಗೆ ಸಮಾಧಾನ ಹೇಳುವ ಆದರ್ಶ ದಾಂಪತ್ಯದ ಚಿತ್ರಣ ಆ ಪಾತ್ರಗಳ ಘನತೆ ಏರಿಸುತ್ತಿತ್ತು. ತುಳು ಪ್ರಸಂಗದಲ್ಲೂ ಕೋಟಿ, ದೇವುಪೂಂಜ, ಕಾಂತಬಾರೆ ಮುಂತಾದ ಪಾತ್ರಗಳನ್ನೂ ಚೆನ್ನಾಗಿ ನಿರ್ವಹಿಸಿದ್ದಾರೆ. ಸರಳತೆ, ವಿನಯದ ನಡವಳಿಕೆ, ಕಿರಿಯ ಕಲಾವಿದರಿಗೆ ಹೇಳಿ ಕೊಡುವ ವಿಧಾನ ಶೆಟ್ಟರ ವ್ಯಕ್ತಿತ್ವವನ್ನು ಎತ್ತರಕ್ಕೆ ಏರಿಸಿತ್ತು. ಇಂದಿಗೂ ಕಟೀಲು ಮೇಳದ ಕಲಾವಿದರು, ತಾವು ಪಾತ್ರ ಮಾಡುವಾಗ ಅದಕ್ಕೆ ಪೆರುವಾಯಿಯವರ ಪಾತ್ರದ ಮೂಲಚಿತ್ರಣವನ್ನೇ ಆಧಾರವಾಗಿಸಿ ಪ್ರಸ್ತುತಿ ನೀಡುವುದನ್ನು ಗಮನಿಸಬಹುದು. ಪೆರುವಾಯಿಯವರಿಗೆ ಸಂಬಂಧದಲ್ಲಿ ಅಳಿಯ ಹಾಗೂ ಒಂದರ್ಥದಲ್ಲಿ ಶಿಷ್ಯರಾಗಿರುವ ಜಯಪ್ರಕಾಶ್ ಶೆಟ್ಟಿ ಪೆರ್ಮುದೆ, ಗಣೇಶ್ ಶೆಟ್ಟಿ ಕನ್ನಡಿಕಟ್ಟೆ ಮುಂತಾದ ಹಲವಾರು ಕಲಾವಿದರಲ್ಲಿ ಪೆರುವಾಯಿಯವರ ಅರ್ಥಗಾರಿಕೆಯ ಛಾಯೆಯನ್ನು ಕಾಣಬಹುದು. ಪೆರುವಾಯಿವರು ನಿರ್ವಹಿಸಿದ ಅನೇಕ ಪಾತ್ರಗಳು ಇಂದಿಗೂ ಕಟೀಲು ಮೇಳದ ಕಲಾವಿದರಿಗೆ ಮೂಲ ಆಕರ ಎನಿಸಿರುವುದು ಸುಳ್ಳಲ್ಲ. ತಮ್ಮ 52 ವರ್ಷಗಳ ತಿರುಗಾಟದಲ್ಲಿ ಯಾರೊಂದಿಗೂ ವೈಷಮ್ಯ ಹೊಂದಿರದ "ಅಜಾತಶತ್ರು" ಎನಿಸಿದ್ದರು. ಯಕ್ಷಗಾನದ ಪರಂಪರೆಯ ಹಲವಾರು ನೃತ್ಯ, ನಡೆ, ಪ್ರಸಂಗ ಜ್ಞಾನದ "ಜ್ಞಾನ ಭಂಡಾರ" ಎನಿಸಿದ ಶೆಟ್ಟರಲ್ಲಿ ಹಲವಾರು ಅಮೂಲ್ಯವಾದ ಮಾಹಿತಿಗಳಿದ್ದವು. ಇಂದು ಯಕ್ಷರಂಗದಲ್ಲಿ ಕಣ್ಮರೆಯಾಗಿರುವ ಪರಂಪರೆಯ ನಾಟ್ಯ ವಿಧಾನದ ಬಗ್ಗೆ ಖಚಿತ ಜ್ಞಾನವಿತ್ತು. ಏಳು ತಿಂಗಳ ಹಿಂದೆ ಮೂಡುಬಿದಿರೆಯ "ಯಕ್ಷದೇವ ಮಿತ್ರಮಂಡಳಿ" ಯವರು ಪೆರುವಾಯಿಯವರನ್ನು "ಯಕ್ಷದೇವ ಪ್ರಶಸ್ತಿ" ನೀಡಿ ಗೌರವಿಸಿದ್ದರು. ಅಂದು ಶೆಟ್ಟರ ಕುರಿತಾಗಿ "ಅಭಿನಂದನಾ ಮಾತು" ಹೇಳುವ ಅವಕಾಶ ನನಗೇ ದೊರಕಿತ್ತು. ಅಂದು ನನ್ನನ್ನು ಕಂಡು ಶೆಟ್ಟರು ತುಂಬಾ ಸಂತೋಷಗೊಂಡಿದ್ದರು. ಅಂದು ನಾನು ಶೆಟ್ಟರೇ, ಇಂದು ನಿಮ್ಮ ಕುರಿತಾಗಿ ಅಭಿನಂದನಾ ನುಡಿ ನಾನೇ ಹೇಳಲು ಸೂಚಿಸಿದ್ದಾರೆ. ನಿಮ್ಮ ಬಗ್ಗೆ ಸ್ವಲ್ಪ ವಿವರ ಕೊಡಿ ಎಂದಾಗ ಶೆಟ್ಟರು, 'ಕುಡ್ವರೇ, ನನ್ನ ಬಗ್ಗೆ ನಿಮಗೆ ಎಲ್ಲಾ ತಿಳಿದಿದೆ. ಈ ಹಿಂದೆ ನೀವು ನನ್ನ ಬಗ್ಗೆ ಲೇಖನ ಬರೆದಿದ್ದೀರಿ. ಇನ್ನು ಏನು ಹೇಳುವುದು?' ಎಂದು ವಿನೋದವಾಗಿ ನುಡಿದು, ಯಕ್ಷಗಾನ ಪರಂಪರೆ, ಯಾವ ಪಾತ್ರಕ್ಕೆ ಯಾವ ಬಣ್ಣಗಾರಿಕೆ, ಯಾವ ಆಯುಧ, ಯಾವ ವೇಷಭೂಷಣ, ಯಾವ ಕಿರೀಟ ಎಂಬುದರ ಬಗ್ಗೆ ಚೆನ್ನಾಗಿ ತಿಳಿಸಿದ್ದರು. ಶೆಟ್ಟರು ಅಂದು ನನ್ನಲ್ಲಿ ಅಪೂರ್ವವಾದ ಮಾಹಿತಿಯೊಂದನ್ನು ತಿಳಿಸಿದ್ದರು. ಅವರೇ ತಿಳಿಸಿದಂತೆ ಋತುಪರ್ಣನ ಪಾತ್ರಕ್ಕೆ ಹಿಂದೆ ಪರಂಪರೆಯ ಸಭಾಕಳಸದ ಒಡ್ಡೋಲಗ ಕೊಡುವ ಕ್ರಮವಿತ್ತು. ಆದರೆ ಅದು ಈಗ ಇಲ್ಲ, ಈಗಿನ ಕಲಾವಿದರಿಗೆ ಈ ವಿಷಯವೂ ತಿಳಿದಿರಲಿಕ್ಕಿಲ್ಲ. ಈ ಒಡ್ಡೋಲಗದ ಕ್ರಮ ಈಗ ಲುಪ್ತವಾಗಿದೆ. ಪೆರುವಾಯಿಯವರು ಈ ಕ್ರಮ ಅರಿತಿದ್ದರಲ್ಲದೇ, ಒಂದೆರಡು ಕಡೆ ಇದರ ಪ್ರಸ್ತುತಿಯನ್ನೂ ನೀಡಿದ್ದಾರೆ ಎಂದು ನನ್ನಲ್ಲಿ ತಿಳಿಸಿದ್ದರು. ಶೆಟ್ಟರ ಬಾಲ್ಯದಲ್ಲಿ ಕುರಿಯ ವಿಠಲ ಶಾಸ್ತ್ರಿಯವರ ನೇತೃತ್ವದಲ್ಲಿ ಕುರುಕ್ಷೇತ್ರ ಎಂಬ ಪ್ರಸಂಗವನ್ನು, ಯಕ್ಷಗಾನದ ಹಿರಿಯ ವಿದೇಶೀ ಸಂಶೋಧಕಿ ಮಾರ್ಥಾ ಆಸ್ಟೀನ್ ರವರು ಏರ್ಪಡಿಸಿದ್ದರು. ಅಂದು ಹೊಸಹಿತ್ಲು ಮಹಾಲಿಂಗ ಭಟ್ಟರ ಅಭಿಮನ್ಯು ಪಾತ್ರಕ್ಕೆ ಸಾರಥಿಯ ಪಾತ್ರ ಮಾಡಿದವರು ಪೆರುವಾಯಿ ನಾರಾಯಣ ಶೆಟ್ಟರು. ಅಂದಿನ ಶೆಟ್ಟರ ಸಾರಥಿಯ ಪಾತ್ರ ನೋಡಿ ಮೆಚ್ಚಿದ ಕುರಿಯ ವಿಠಲ ಶಾಸ್ತ್ರಿಗಳು, ಶೆಟ್ಟರನ್ನು, ಗಜಮೇಳವಾದ ಧರ್ಮಸ್ಥಳ ಮೇಳದಲ್ಲಿ ಎರಡನೇ ಪುಂಡುವೇಷಕ್ಕೆ ಆರಿಸಿಕೊಂಡರು. ಧರ್ಮಸ್ಥಳದಂತಹ ಗಜಮೇಳದಲ್ಲಿ, ಮೇಳ ಸೇರಿದಾಕ್ಷಣವೇ, ಎರಡನೇ ಪುಂಡುವೇಷಧಾರಿಯ ಪಾತ್ರ ಮಾಡುವುದೆಂದರೆ, ಅದೊಂದು ದೊಡ್ಡ ಸಾಧನೆಯೇ ಹೌದು. ಈ ಘಟನೆಯು ಪೆರುವಾಯಿಯವರ ವೃತ್ತಿಜೀವನಕ್ಕೆ ಒಂದು ದೊಡ್ಡ ತಿರುವು ನೀಡಿತ್ತು ಎಂಬುದು ಗಮನಾರ್ಹ. ಶೆಟ್ಟರು ನೂರಾರು ಸಂಮಾನ ಪ್ರಶಸ್ತಿಯನ್ನು ಪಡೆದಿದ್ದಾರೆ. ಒಂದು ಲಕ್ಷ ನಗದಿನೊಂದಿಗೆ ಯಕ್ಷಧ್ರುವ ಪಟ್ಲ ಪ್ರಶಸ್ತಿ 2016, ಯಕ್ಷಗಾನ ಅಕಾಡೆಮಿ ಪ್ರಶಸ್ತಿ, ಅಖಿಲ ಭಾರತ ತುಳುಕೂಟ ಪ್ರಶಸ್ತಿ, ಸಿಂಧೂರ ಪ್ರಶಸ್ತಿ, ಯಕ್ಷದೇವ ಪ್ರಶಸ್ತಿ, ಬಂಟರ ಸಂಘ ಬೆಂಗಳೂರು ಪ್ರಶಸ್ತಿ ಸಹಿತ ನೂರಾರು ಸಂಮಾನ ಪಡೆದಿರುವ ಶೆಟ್ಟರಿಗೆ ಕರ್ನಾಟಕ ಸರಕಾರೀ ಮಟ್ಟದ ಪ್ರಶಸ್ತಿ, ಮನ್ನಣೆ ದೊರಕಿಲ್ಲ ಎಂಬುದು ವಿಷಾದನೀಯ. ಸುಮಾರು ಆರು ದಶಕಗಳ ಕಾಲ ಯಕ್ಷರಂಗದಲ್ಲಿ ದುಡಿದ ಶೆಟ್ಟರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ದೊರಕಿಲ್ಲ ಎಂಬುದು ಬೇಸರವೂ ಹೌದು. ಈ ಬಗ್ಗೆ ಅತೀವವಾದ ವೇದನೆಯೂ ಶೆಟ್ಟರಿಗೆ ಇತ್ತು. ಎರಡು ವರ್ಷಗಳ ಹಿಂದೆ ರಾಜ್ಯೋತ್ಸವ ಪ್ರಶಸ್ತಿಗಾಗಿ ಪ್ರಯತ್ನಿಸಿದ್ದ ಶೆಟ್ಟರು, ಅದಕ್ಕೆ ಪೂರಕವಾಗಿ ನನ್ನಿಂದ ಯಕ್ಷಸಂಗಮದ ಪರವಾಗಿ ಒಂದು ಶಿಫಾರಸು ಪತ್ರವನ್ನು ಪಡೆದಿದ್ದರು. ಆದರೂ, ರಾಜ್ಯೋತ್ಸವ ಪ್ರಶಸ್ತಿ ಶೆಟ್ಟರಿಗೆ ದೊರಕದೇ ಮರೀಚಿಕೆಯೇ ಆಗಿ ಉಳಿಯಿತು. ಈ ಬಗ್ಗೆ ತೀವ್ರವಾದ ಬೇಸರವನ್ನು ನನ್ನಲ್ಲಿ ತೋಡಿಕೊಂಡಿದ್ದರು. ವಶೀಲಿಬಾಜಿ, ಲಾಬಿ ನಡೆಸಲು ಗೊತ್ತಿಲ್ಲದ ಕಾರಣ, ಅರ್ಹವಾಗಿ ಸಲ್ಲಬೇಕಾದ "ರಾಜ್ಯೋತ್ಸವ ಪ್ರಶಸ್ತಿ" ಶೆಟ್ಟರಿಗೆ ದೊರಕದೇ ಹೋಯಿತು ಎಂಬಲ್ಲಿ ನಮ್ಮ ಪ್ರಶಸ್ತಿ ನೀಡುವ ವ್ಯವಸ್ಥೆಯೇ ಕಲುಷಿತವಾಗಿದೆ ಎಂಬುದಕ್ಕೆ ಒಂದು ಉದಾಹರಣೆ ಎನ್ನಬಹುದು. ಬಲಿಪ ನಾರಾಯಣ ಭಾಗವತರ ಸಂಸ್ಮರಣಾ ಕಾರ್ಯಕ್ರಮಕ್ಕೆ ಬಂದಿದ್ದ ಶೆಟ್ಟರು ತನ್ನ ಈ ಸಾಧನೆಯ ಹಿಂದಿರುವ ಶಕ್ತಿ ಬಲಿಪ ಭಾಗವತರು ಎಂದು ನುಡಿದು, ಬಲಿಪರಿಗೆ ನಮನ ಸಲ್ಲಿಸಿದ್ದರು. ಶೆಟ್ಟರು ತಾಳಮದ್ದಳೆ ಕ್ಷೇತ್ರದಲ್ಲೂ ಅರ್ಥಧಾರಿಗಳಾಗಿ ಗುರುತಿಸಿಕೊಂಡಿದ್ದಾರೆ. ನಮ್ಮ ಯಕ್ಷಸಂಗಮ–ಮೂಡುಬಿದಿರೆ ಕಾರ್ಯಕ್ರಮದಲ್ಲಿ ಶೆಟ್ಟರೂ ಒಂದೆರಡು ಬಾರಿ ಅರ್ಥ ಹೇಳಿ ಮಿಂಚಿದ್ದಾರೆ. ಶೆಟ್ಟರು ಧರ್ಮಪತ್ನಿ, ಮೂವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಸಾವಿರಾರು ಅಭಿಮಾನಿಗಳನ್ನು ಅಗಲಿದ್ದಾರೆ. ಅವರ ಸುಪುತ್ರರಾದ ರವಿರಾಜ ಶೆಟ್ಟರು ಯಕ್ಷಗಾನದ ಕಲಾವಿದರಾಗಿ ಮೇಳದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಶೆಟ್ಟರ ಆತ್ಮಕ್ಕೆ ಸದ್ಗತಿ ದೊರಕಲಿ ಎಂದು ಕಲಾಮಾತೆಯಲ್ಲಿ ಪ್ರಾರ್ಥನೆ.

***ಲೇಖಕರು– ಎಂ.ಶಾಂತರಾಮ ಕುಡ್ವ, ಮೂಡುಬಿದಿರೆ***

# ಯಕ್ಷಸಾಹಿತ್ಯ ಪರಿಚಯ 02

ಯಕ್ಷಗಾನ ಪ್ರಸಂಗ ಕೃತಿಗಳ ಜೊತೆಗೆ ಸುಮಾರು ನೂರು ವರ್ಷಳಿಂದ ಹಲವು ಯಕ್ಷಸಾಹಿತ್ಯ ಕೃತಿಗಳು ಪ್ರಕಟವಾಗಿವೆ. ಹಲವು ಹಿರಿಯ ಕಲಾವಿದರ ಅಭಿನಂದನಾ ಗ್ರಂಥ, ಸಂಸ್ಮರಣಾ ಗ್ರಂಥ, ವಿಮರ್ಶೆ, ಸಂಶೋಧಾನಾ ಕೃತಿ, ಲೇಖನ ಸಂಗ್ರಹ ಇತ್ಯಾದಿ ವಿಭಾಗದಲ್ಲಿ ಸಾವಿರಾರು ಕೃತಿಗಳು ಪ್ರಕಟವಾಗಿವೆ. ಅವುಗಳ ಪರಿಚಯವನ್ನು ಈ ಅಂಕಣದಲ್ಲಿ ಮಾಡಿಕೊಡುತ್ತಿದ್ದೇವೆ. ಈ ಸಂಚಿಕೆಯಲ್ಲಿ ಕೆಲವು ಪ್ರಮುಖ ಹಿರಿಯ ಕಲಾವಿದರ ಅಭಿನಂದನಾ ಮತ್ತು ಸಂಸ್ಮರಣಾ ಕೃತಿಗಳ ವಿವರ ನೀಡುತ್ತಿದ್ದೇವೆ.


| ಕ್ರಮ ಸಂಖ್ಯೆ | ಕೃತಿಯ ಹೆಸರು | ಪ್ರಕಟಣಾ ವರ್ಷ | ಲೇಖಕರು/ಸಂಪಾದಕರು | ಪ್ರಕಾಶಕರು | ವಿಶೇಷತೆ |
|---|---|---|---|---|---|
| 6 | ರಂಗ ವೈಖರಿ | 1981 | ಪಾದೆಕಲ್ಲು ನರಸಿಂಹ ಭಟ್, ಡಾ ಪಾದೆಕಲ್ಲು ವಿಷ್ಣು ಭಟ್ | ಶ್ರೀ ಮಾಂಬಾಡಿ ನಾರಾಯಣ ಭಾಗವತ ಸನ್ಮಾನ ಸಮಿತಿ, ಮಿತ್ತನಡ್ಕ ಕರೋಪಾಡಿ | ಮಾಂಬಾಡಿ ನಾರಾಯಣ ಭಾಗವತರ ವ್ಯಕ್ತಿ ಚಿತ್ರ, ಯಕ್ಷಗಾನ ಛಂದಸ್ಸು, ಅರ್ಥಗಾರಿಕೆ, ತಾಂತ್ರಿಕತೆ ಇತ್ಯಾದಿ ಹಲವು ವಿಷಯಗಳ ಲೇಖನ ಸಂಕಲನ |
| 7 | ದಶಾವತಾರದ ಮಾತು | 1982 | ಕೆ ಎಚ್ ಸೂರ್ಯನಾರಾಯಣ ಹಂದೆ | ಹಂದೆ ಪ್ರಕಾಶನ, ಕೋಟ | ಹಾರಾಡಿ ರಾಮ ಗಾಣಿಗರ ಯಕ್ಷಗಾನ ಭೂಮಿಕೆಯಲ್ಲಿನ ಮುತ್ತುಗಳ ಸಂಗ್ರಹವನ್ನು ಒಳಗೊಂಡ ಕೃತಿ |
| 8 | ಉದ್ದಾಮ | 1986 | ಬರೆ ಕೇಶವ ಭಟ್ ಅಡ್ಯನಡ್ಕ | ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘ ಕೈರಂಗಳ | ಶ್ರೀ ಶೇಣಿ ಅಭಿನಂದನಾ ಗ್ರಂಥ |
| 9 | ಮಂದಾರ | 1986 | ಎಚ್ ಬಿ ಎಲ್ ರಾವ್ | ಪದವೀಧರ ಯಕ್ಷಗಾನ ಸಮಿತಿ, ಮುಂಬಯಿ | ರಸಋಷಿ ದಾಮೋದರ ಮಂಡೆಚ್ಚರ ಸಂಸ್ಮರಣ ಗ್ರಂಥ |
| 10 | ರಸಿಕ ರತ್ನ | 1988 | ನಯನ ಕುಮಾರ | | ವಿಟ್ಲಾ ಗೋಪಾಲಕೃಷ್ಣ ಜೋಷಿ ಅಭಿನಂದನಾ ಗ್ರಂಥ |
| 11 | ಬಣ್ಣ | 1988 | ಪ್ರಭಾಕರ ಶಿಶಿಲ | ತೆಂಕುತಿಟ್ಟು ಯಕ್ಷಗಾನ ಹಿತರಕ್ಷಣಾ ವೇದಿಕೆ ಸುಳ್ಯ | ಬಣ್ಣದ ಮಾಲಿಂಗರ ಸನ್ಮಾನ ಸ್ಮರಣಿಕೆ |
| 12 | ಗಾನ ಕೋಗಿಲೆ | 1988 | ಏರ್ಯ ಲಕ್ಷ್ಮೀನಾರಾಯಣ ಆಳ್ವ | ದಾಮೋದರ ಮಂಡೆಚ್ಚ ಸ್ಮಾರಕ ಸಮಿತಿ, ಜೋಡುಮಾರ್ಗ ಬಂಟ್ವಾಳ | ರಸಋಷಿ ದಾಮೋದರ ಮಂಡೆಚ್ಚರ ಸಂಸ್ಮರಣ ಗ್ರಂಥ |
| 13 | ಯಕ್ಷ ಬ್ರಹ್ಮ | 1988 | ಕೃಷ್ಣ ಭಟ್ ತಾಳ್ತಜೆ | ಅಗರಿ ಅಭಿನಂದನ ಗ್ರಂಥ ಸಮಿತಿ ಬೆಳ್ತಂಗಡಿ | ಶ್ರೀ ಅಗರಿ ಶ್ರೀನಿವಾಸ ಭಾಗವತರ ಅಭಿನಂದನಾ ಗ್ರಂಥ |
| 14 | ಸ್ವರ್ಣಕಮಲ | 1988 | ಮುಳಿಯ ಮಹಾಬಲ ಭಟ್ | ಅರ್ಕುಳ ಸುಬ್ರಾಯ ಆಚಾರ್ಯ ಸ್ಮಾರಕ ಸಮಿತಿ ಮಂಗಳೂರು | ಅರ್ಕುಳ ಸುಬ್ರಾಯ ಆಚಾರ್ಯ (1885-1945) ಸಂಸ್ಮರಣಗ್ರಂಥ |
| 15 | ಉತ್ತುಂಗ | 1989 | ಅಂಬಾತನಯ ಮುದ್ರಾಡಿ | ಸಾಹಿತ್ಯಸಂಘ ಮಣಿಪಾಲ | ಪೊಲ್ಯ ದೇಜಪ್ಪ ಶೆಟ್ಟಿಯವರ ಜೀವನ ಸಾಧನೆ ಪರಿಚಯ |

*ಸಂಗ್ರಹ: ಉಮೇಶ್ ಶಿರೂರು ಬೆಂಗಳೂರು*

*ದೂರವಾಣಿ – 9448353910*

ಗಮನಿಸಿ– ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳ ಅನಿಸಿಕೆ ಅಭಿಪ್ರಾಯಗಳು ಲೇಖಕರದ್ದೇ ಹೊರತು, ಸಂಪಾದಕ ಮಂಡಳಿಯದ್ದಲ್ಲ. ನಿಮ್ಮ ಪ್ರತಿಕ್ರಿಯೆಯನ್ನು ಕಳುಹಿಸಬೇಕಾದ ಇ–ಮೇಲ್ – nadanoopuravandaru@gmail.com ಮೊಬೈಲ್ ಸಂಖ್ಯೆ– 9482847978. ನಮ್ಮ ವೆಬ್ ಸೈಟ್ ವಿಳಾಸ– https://nyt.1ngo.in/ – ಸಂಪಾದಕರು

# ಪ್ರಸಂಗಕರ್ತ ಅಗರಿ ಭಾಸ್ಕರ ರಾವ್ ದೈವಾಧೀನ



ಹಿರಿಯ ಯಕ್ಷಗಾನ ಪ್ರಸಂಗಕರ್ತ ಅಗರಿ ಭಾಸ್ಕರ ರಾವ್ ರವರು ೩೧-೧೨-೨೦೨೩ ರಂದು ದೈವಾಧೀನರಾಗಿದ್ದು ಯಕ್ಷಗಾನ ಪ್ರಸಂಗ ಸಾಹಿತ್ಯಕ್ಕೆ ಅವರು ನೀಡಿದ ಕೊಡುಗೆಗಳು ಗಮನಾರ್ಹ.೧೯೪೮ ರಲ್ಲಿ ಜನಿಸಿದ ಇವರು ಹಿರಿಯ ಭಾಗವತ, ಪ್ರಸಂಗಕರ್ತ ಅಗರಿ ಶ್ರೀನಿವಾಸ ಭಾಗವತರ ಸುಪುತ್ರರು. ತಾಯಿ ರುಕ್ಮಿಣಿ, ಪತ್ನಿ ಜಲಜಾಕ್ಷಿ. ಅಗಸ್ತ್ಯ ಚರಿತ್ರೆ, ಗಜಾಸುರ ವಧೆ, ತಪಸ್ವೀ ಮಹೇಂದ್ರ, ಧರ್ಮ ವಿಜಯ, ರುದ್ರಾಂಗತ ಲಕ್ಷ್ಮೀನರಸಿಂಹ, ವೀರರಾಣಿ ಅಪ್ರಮೇಯಿ, ಶ್ರೀ ರಾಘವೇಂದ್ರ ಮಹಾತ್ಮೆ, ಶ್ರೀ ವಾಣೀ ವಿಲಾಸ,ಶ್ರೀ ವಿಶ್ವಕರ್ಮಮಹಾತ್ಮೆ, ಶ್ರೀ ದೇವಿ ತ್ರಿಕಣ್ಣೇಶ್ವರಿ ಮಹಾತ್ಮೆ, ಶ್ರೀ ಹರಿಲೀಲಾರ್ಣವ, ಪೆರ್ಡೂರು ಕ್ಷೇತ್ರ ಮಹಾತ್ಮೆ, ಬರ್ಬರೀಕ ಪ್ರತಾಪ ಮೊದಲಾದ ಪ್ರಸಂಗ ಕೃತಿಗಳನ್ನು ರಚಿಸಿದ್ದಾರೆ. ಶೇವಧಿ ಪ್ರಕಾಶನ, ಉಡುಪಿ ಇವರು ಅಗರಿ ಭಾಸ್ಕರ ರಾಯರ ಹತ್ತು ಪ್ರಸಂಗಗಳನ್ನು ಒಳಗೊಂಡ ಯಕ್ಷಗಾನ ಪ್ರಸಂಗ ಸಂಪುಟ ೨೦೧೮ರಲ್ಲಿ ಡಾ ಪಾದೆಕಲ್ಲು ವಿಷ್ಣು ಭಟ್ಟರ ಸಂಪಾದಕತ್ವದಲ್ಲಿ ಪ್ರಕಟಿಸಿದ್ದಾರೆ.

***ಉಮೇಶ್ ಶಿರೂರು ಬೆಂಗಳೂರು***

---

# ಯಕ್ಷಸುಮತಿ–2024 ಲೋಗೋ ಹಾಗೂ ಘೋಷಣಾ ವಾಕ್ಯ ರಚನೆಯ ಸ್ಪರ್ಧೆ




**ಆತ್ಮೀಯ ಓದುಗರೇ ಹಾಗೂ ಯಕ್ಷಾಭಿಮಾನಿಗಳೇ,**

2024 ಮಾರ್ಚ್ 16ನೇ ಶನಿವಾರದಂದು ಮಂಗಳೂರು ವಿಶ್ವ ವಿದ್ಯಾನಿಲಯ ಕಾಲೇಜಿನ ರವೀಂದ್ರ ಕಲಾಭವನದಲ್ಲಿ ರಾಜ್ಯ ಮಟ್ಟದ ಮಹಿಳಾ ಕಲಾವಿದೆಯರ ಸಮ್ಮಿಲನ ಯಕ್ಷಸುಮತಿ–2024 ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದ ಅಂಗವಾಗಿ ಸಾರ್ವಜನಿಕರಿಗೆ ಲಾಂಛನ (ಲೋಗೋ) ಹಾಗೂ ಘೋಷಣಾ ವಾಕ್ಯ (ಥೀಮ್) ರಚಿಸುವ ಸ್ಪರ್ಧೆಯನ್ನು ನಾದನೂಪುರ ಯಕ್ಷೋತ್ಥಾನ ಟ್ರಸ್ಟ್ ವಂಡಾರು ಆಯೋಜಿಸಿದೆ. ಮಹಿಳಾ ದಿನಾಚರಣೆಯ ಅಂಗವಾಗಿ ಯಕ್ಷಗಾನ ಕ್ಷೇತ್ರದಲ್ಲಿ ಮಹಿಳೆಯನ್ನು ಸಾಧನೆಯನ್ನು ಗುರುತಿಸಿ ಗೌರವಿಸಿ ಸಂಭ್ರಮಿಸುವ ಯಕ್ಷಗಾನದಲ್ಲಿ ಮಹಿಳಾ ಕ್ರಾಂತಿಯ ವಿಚಾರವನ್ನು ಸೂಚಿಸುವ ಲಾಂಛನ ಹಾಗೂ ಘೋಷಣಾ ವಾಕ್ಯ ರಚಿಸಿ ನಮಗೆ ಕಳುಹಿಸಿಕೊಡಬಹುದು. ಆಯ್ಕೆಯಾದ ಲೋಗೋ ಹಾಗೂ ಘೋಷಣಾ ವಾಕ್ಯಕ್ಕೆ ಕಾರ್ಯಕ್ರಮ ನಡೆಯುವ ವೇದಿಕೆಯಲ್ಲಿ ಸೂಕ್ತ ನೀಡಲಾಗುವುದು.

**ಸ್ಪರ್ಧೆಯ ನಿಯಮಗಳು**

- ಲೋಗೋ ಹಾಗೂ ಥೀಮ್ ಎರಡಕ್ಕೂ ಬೇರೆಬೇರೆ ಬಹುಮಾನಗಳಿವೆ
- ಲೋಗೋ ಹಾಗೂ ಥೀಮ್ ನಿಮ್ಮ ಸ್ವಂತ ಕಲ್ಪನೆಯಾಗಿರಬೇಕು. ಬೇರೆ ಕಾರ್ಯಕ್ರಮದ ನಕಲು ಆಗಿರಬಾರದು. ಬೇರೆಲ್ಲೂ ಪ್ರಕಟವಾಗಿರಬಾರದು.
- ಒಬ್ಬರು ಎಷ್ಟು ಬೇಕಾದರೂ ಲೋಗೋ ಕಳುಹಿಸಿಕೊಡಬಹುದು
- ಪಿಡಿಎಫ್ ಫಾರ್ಮಾಟ್ ನಲ್ಲಿ ಕಳುಹಿಸಿ. ಜೊತೆಗೆ ನಿಮ್ಮ ಭಾವಚಿತ್ರ, ಹೆಸರು ವಿಳಾಸ ದೂರವಾಣಿ ಸಂಖ್ಯೆ ನಮೂದಿಸಿ
- ಆಯೋಜಕರ ತೀರ್ಮಾನವೇ ಅಂತಿಮ
- ಥೀಮ್/ ಘೋಷಣಾ ವಾಕ್ಯ 10-12 ಪದಗಳಿಗೆ ಸೀಮಿತವಾಗಿರಬೇಕು

**ನಿಮ್ಮ ಕಲ್ಪನೆಯ ಲೋಗೋ ಹಾಗೂ ಥೀಮ್ ನನ್ನು ಕಳುಹಿಸಬೇಕಾದ ಕೊನೆಯ ದಿನಾಂಕ – ಫೆಬ್ರವರಿ 28, 2024.**

**ಕಳುಹಿಸಬೇಕಾದ ವಾಟ್ಸಾಪ್ ಸಂಖ್ಯೆ: ಶುಭಾಶಯ –9482847978, ಶ್ರೀಮತಿ ಸಾಯಿಸುಮಾ ಎಂ ನಾವಡ– 9632039217**

***ಕಿರುಕಥೆ*** – ಪುಲೋಮೆ ಬ್ರಹ್ಮರ್ಷಿಗಳಲ್ಲಿ ಒಬ್ಬನಾದ ಭೃಗು ಋಷಿಯ ಪತ್ನಿ. ಈಕೆಗೆ ಖ್ಯಾತೀ ದೇವಿಯೆಂದೂ ಹೆಸರಿದೆ. ಭೃಗು ಸೃಷ್ಟಿಕರ್ತ ಬ್ರಹ್ಮನ ಮಾನಸ ಪುತ್ರರಲ್ಲಿ ಒಬ್ಬನು ಮತ್ತು ಇವನು ಬ್ರಹ್ಮರ್ಷಿಯಾಗಿದ್ದನು. ಪುಲೋಮೆ ಬಹಳ ಸದ್ಗುಣಶೀಲ ಮತ್ತು ನಿಷ್ಠಾವಂತ ಪತ್ನಿಯಾಗಿದ್ದಳು. ಅವಳು ಗರ್ಭಿಣಿಯಾಗಿದ್ದಾಗ, ಒಮ್ಮೆ ಭೃಗು ತನ್ನ ಬೆಳಿಗ್ಗೆಯ ಧಾರ್ಮಿಕ ವಿಧಿಗಳನ್ನು ನೆರವೇರಿಸಲು ಹೊರ ಹೋಗಿದ್ದನು. ಅವಳನ್ನು ಅಗ್ನಿಯ ರಕ್ಷಣೆಯಲ್ಲಿ ಬಿಟ್ಟಿದ್ದನು. ಆದೇ ಸಮಯದಲ್ಲಿ, ಪುಲೋಮನೆಂಬ ರಾಕ್ಷಸನು ಭೃಗುವಿನ ಆಶ್ರಮಕ್ಕೆ ಬಂದು ಪುಲೋಮೆಯನ್ನು ಕಂಡನು. ಹಿಂದೊಮ್ಮೆ ಪುಲೋಮೆಯನ್ನು ವಿವಾಹವಾಗುವ ಇಚ್ಛೆಯನ್ನು ಅವಳ ತಂದೆಯಲ್ಲಿ ಕೇಳಿದ್ದ. ಆದರೆ ಅವಳ ತಂದೆ ಒಪ್ಪದೆ ಅವಳನ್ನು ಭೃಗುವಿಗೆ ಕೊಟ್ಟು ಮದುವೆ ಮಾಡಿದ. ಈಗ ಈಕೆ ಭೃಗುವಿನ ಪತ್ನಿ, ಭೃಗು ಈಕೆಯನ್ನು ತನ್ನ ಉಪಸ್ಥಿತಿಯಲ್ಲಿ ವಿಧಿ ವಿಧಾನಗಳ ಪ್ರಕಾರ ವಿವಾಹವಾಗಿದ್ದನೆಂದು ಅಗ್ನಿಯು ಅವನಿಗೆ ದೃಢಪಡಿಸಿದಾಗ, ಪುಲೋಮನು ಅವಳನ್ನು ಅಪಹರಿಸಲು ಪ್ರಯತ್ನಿಸಿದನು. ಪುಲೋಮನು ಪುಲೋಮೆಯ ಸೌಂದರ್ಯದಿಂದ ಮರುಳುಗೊಂಡು, ಹಂದಿಯ ರೂಪಕ್ಕೆ ಮಾರ್ಪಾಡಾಗಿ ಅವಳನ್ನು ಅಪಹರಿಸಿದನು. ಇದರಿಂದ ಭಯಭೀತಳಾದ ಪುಲೋಮೆಗೆ ಗರ್ಭಸ್ರಾವವಾಯಿತು. ಅವಳ ಮಗು ನೆಲದ ಮೇಲೆ ಬಿದ್ದಿತು. ಕೆಲ ಕಥೆಯ ಪ್ರಕಾರ ಮಗುವು ತನ್ನನ್ನು ತಾನೇ ಅವಳ ಗರ್ಭದಿಂದ ತೆಗೆಸಿಕೊಂಡಿತು. ಈ ಮಗನಿಗೆ ಚ್ಯವನನೆಂಬ ಹೆಸರು. ಚ್ಯವನ ಅಂದರೆ ಗರ್ಭದಿಂದ ಬಿದ್ದವನು. ಮಗುವು ಸೂರ್ಯನಂತೆ ಪ್ರಕಾಶಮಾನವಾಗಿತ್ತು ಮತ್ತು ಪುಲೋಮನು ಆ ಮಗುವಿನ ದರ್ಶನದಿಂದ ಸುಟ್ಟು ಬೂದಿಯಾದನು. ತನ್ನ ದುರವಸ್ಥೆಯಿಂದ ಪೀಡಿತಳಾದ ಪುಲೋಮೆ, ಬಹಳ ಕಣ್ಣೀರು ಸುರಿಸಿದಳು. ಎಷ್ಟರ ಮಟ್ಟಿಗೆ ಎಂದರೆ, ಅವಳ ಕಣ್ಣೀರು ಮಧುಸಾರಸ ಎಂಬ ನದಿಯನ್ನು ಸೃಷ್ಟಿಸಿತು. ಈ ನದಿಯು ಮುಂದೆ ಚ್ಯವನನು ಋಷಿಯಾದ ಮೇಲೆ ಅವನ ಆಶ್ರಮದ ನೆಲೆಯಾಯಿತು. ಪುಲೋಮೆಯು ನಂತರ ಆಶ್ರಮಕ್ಕೆ ಹಿಂದಿರುಗಿ ತನ್ನ ಮತ್ತು ತನ್ನ ಮಗನೊಂದಿಗೆ ನಡೆದ ಘಟನೆಗಳ ಬಗ್ಗೆ ಭೃಗುವಿಗೆ ತಿಳಿಸಿದಳು. ಭೃಗು ತನ್ನ ಮಗನನ್ನು ನೋಡಿ ಸಂತೋಷಗೊಂಡರೂ, ಅಗ್ನಿಯು ಅವಳ ನಿಜ ಗುರುತನ್ನು ಪುಲೋಮನಿಗೆ ಬಹಿರಂಗಪಡಿಸಿದನು ಎಂದು ಪುಲೋಮೆಯಿಂದ ಕೇಳಿ ಸಿಟ್ಟಾದನು. ತೀವ್ರ ಕ್ರೋಧದಲ್ಲಿ, ಭೃಗುವು ಅಗ್ನಿಗೆ "ನೀನು ಸರ್ವಭಕ್ಷಕನಾಗು" ಎಂದು ಶಾಪ ಕೊಟ್ಟನು.

"ಪುರಾಣ ಪಾತ್ರ ಪ್ರದೀಪಿಕೆ" ಪುಸ್ತಕದಿಂದ